# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಡಿಸೆಂಬರ್ 25, 2021

ಸಂಪುಟ : 48 ಸಂಚಿಕೆ : 224 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com




## ಕ್ರಿಸ್‌ಮಸ್ ಸಂಭ್ರಮ

ದಾವಣಗೆರೆ, ಡಿ.24- ಕಳೆದ ಬಾರಿ ಕಳೆಗುಂದಿದ್ದ ಕ್ರಿಸ್‌ಮಸ್ ಈ ವರ್ಷ ಸಂಭ್ರಮದಿಂದ ಕೂಡಿದೆ. ನಗರದ ಚರ್ಚ್‌ಗಳು ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿವೆ. ಕ್ರೈಸ್ತ ಸಮುದಾಯದವರ ಮನೆಗಳಲ್ಲಿ ಸಂಭ್ರಮ ಮನೆ ಮಾಡಿದ್ದು ಇಂದು ಶನಿವಾರ ಮತ್ತಷ್ಟು (2ನೇ ಪುಟಕ್ಕೆ)

**ಬಾಲ ಏಸುವಿಗೆ ನಮನ...**
ದಾವಣಗೆರೆ ಪಿ.ಜೆ. ಬಡಾವಣೆಯ ಸಂತ ತೋಮಸರ ದೇವಾಲಯದಲ್ಲಿ ಕ್ರಿಸ್‌ಮಸ್ ಅಂಗವಾಗಿ ಶುಕ್ರವಾರ ಬಾಲ ಏಸುವನ್ನು ಗೋದಲಿ (ದನದ ಕೊಟ್ಟಿಗೆ) ಪ್ರತಿಷ್ಠಾಪಿಸ ಲಾಯಿತು. ಮಧ್ಯರಾತ್ರಿ ನಡೆದ ವಿಶೇಷ ಆರಾಧನೆಯನ್ನು ಧರ್ಮಗುರುಗಳು ನಡೆಸಿಕೊಟ್ಟರು.

# ಬೂಸ್ಟರ್ ಪಡೆದವರಲ್ಲೂ ಓಮಿಕ್ರಾನ್

## ದೇಶದಲ್ಲಿ ಎರಡು ಡೋಸ್ ಲಸಿಕೆ ಪಡೆದ 91 ಜನರಿಗೆ ಓಮಿಕ್ರಾನ್

ನವದೆಹಲಿ, ಡಿ. 24 - ವಿಶ್ವದಾದ್ಯಂತ ನಾಲ್ಕನೇ ಕೊರೊನಾ ಅಲೆ ಕಂಡುಬರುತ್ತಿದೆ ಎಂದಿರುವ ಕೇಂದ್ರ ಸರ್ಕಾರ, ಜನರು ವರ್ಷಾಂತ್ಯದ ಹಬ್ಬಗಳ ಸಂದರ್ಭದಲ್ಲಿ ಮೈ ಮರೆಯಬಾರದು ಎಂದು ಎಚ್ಚರಿಸಿದೆ.

ಜನರು ಗುಂಪು ಸೇರುವುದನ್ನು ಹಾಗೂ ಅನಗತ್ಯ ಪ್ರಯಾಣ ನಿಲ್ಲಿಸಬೇಕು. ಕೊರೊನಾಗೆ ಸೂಕ್ತ ವರ್ತನೆ ತೋರುವ ಜೊತೆಗೆ, ಲಸಿಕೆಗಳನ್ನು ಪಡೆಯಬೇಕು ಎಂದು ಸರ್ಕಾರ ಹೇಳಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಭಾರತದಲ್ಲಿ ಇದುವರೆಗೂ 358 ಓಮಿಕ್ರಾನ್ ರೂಪಾಂತರಿ ಸೋಂಕಿತರು ಪತ್ತೆಯಾಗಿದ್ದಾರೆ. 183 ಪ್ರಕರಣಗಳನ್ನು ಇದುವರೆಗೂ ವಿಶ್ಲೇಷಿಸಲಾಗಿದೆ ಎಂದಿದ್ದಾರೆ.

ಇವರಲ್ಲಿ 91 ಜನರು ಎರಡು ಡೋಸ್ ಲಸಿಕೆ ಪಡೆದಿದ್ದಾರೆ ಹಾಗೂ ಮೂವರು ಬೂಸ್ಟರ್ ಪಡೆದಿದ್ದಾರೆ. ಶೇ.70ರಷ್ಟು ಸೋಂಕಿತರು ಲಕ್ಷಣ ರಹಿತರಾಗಿದ್ದಾರೆ ಮತ್ತು ಶೇ.61ರಷ್ಟು ಪುರುಷರಿದ್ದಾರೆ.

ವಿಶ್ವ ಆರೋಗ್ಯ ಸಂಘಟನೆಯ ವರದಿಯ ಪ್ರಕಾರ ಓಮಿಕ್ರಾನ್ ವೇಗವಾಗಿ ಸಮುದಾಯದಲ್ಲಿ ಹರಡುತ್ತದೆ. ಮೂರು ದಿನಗಳಲ್ಲಿ ಸೋಂಕು ದುಪ್ಪಟ್ಟಾಗುತ್ತದೆ.

ದೇಶದ 20 ಜಿಲ್ಲೆಗಳಲ್ಲಿ ವಾರದ ಕೊರೊನಾ ಪಾಸಿಟಿವ್ ಪ್ರಮಾಣ ಶೇ.50 ರಿಂದ 10ರಷ್ಟಿದೆ. ಎರಡು ಜಿಲ್ಲೆಗಳಲ್ಲಿ 10ಕ್ಕಿಂತ ಹೆಚ್ಚಾಗಿದೆ. ಕೇರಳ, ಮಹಾರಾಷ್ಟ್ರ, ತಮಿಳುನಾಡು, ಪಶ್ಚಿಮ ಬಂಗಾಳ ಹಾಗೂ ಕರ್ನಾಟಕಗಳಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ ಹೆಚ್ಚಾಗಿದೆ.

ಜನರು ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆಯ ಸಂದರ್ಭದಲ್ಲಿ ಮೈ ಮರೆಯಬಾರದು. ಓಮಿಕ್ರಾನ್ ಹಿನ್ನೆಲೆಯಲ್ಲಿ ಖಾಸಗಿ ಆರೋಗ್ಯ ವಲಯ ಮಹಾಮಾರಿ ಎದುರಿಸಲು ಸನ್ನದ್ಧವಾಗಿರಬೇಕು.

ಶುಕ್ರವಾರ ದೇಶದಲ್ಲಿ 6,650 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ದೇಶದಲ್ಲೀಗ ಸಕ್ರಿಯ ಸೋಂಕಿತರ ಸಂಖ್ಯೆ 77,516 ಆಗಿದೆ.

### ಲಸಿಕೆ, ರೋಗನಿರೋಧಕತೆಯಿಂದ ನುಣುಚಿಕೊಳ್ಳುವ ರೂಪಾಂತರಿ

ವಾಷಿಂಗ್ಟನ್, ಡಿ. 24 - ಓಮಿಕ್ರಾನ್ ರೂಪಾಂತರಿ ಲಸಿಕೆ ಹಾಗೂ ಸಹಜ ಸೋಂಕಿನಿಂದ ಬಂದ ರೋಗ ನಿರೋಧಕತೆಯಿಂದ ನುಣುಚಿಕೊಳ್ಳುತ್ತದೆ ಎಂದು ಅಧ್ಯಯನವೊಂದು ತಿಳಿಸಿದೆ. ಪ್ರಸಕ್ತ ಬಳಸಲಾಗುತ್ತಿರುವ ಆಂಟಿಬಡಿ ಚಿಕಿತ್ಸೆಯಿಂದಲೂ ಓಮಿಕ್ರಾನ್ ನುಣುಚಿಕೊಳ್ಳಬಹುದು ಎಂಬುದರ ಕಡೆಗೂ ಅಧ್ಯಯನ ಸೂಚನೆ ನೀಡುತ್ತಿದೆ.

ನೇಚರ್ ನಿಯತಕಾಲಿಕದಲ್ಲಿ ಅಧ್ಯಯನ ಪ್ರಕಟಿಸಲಾಗಿದೆ. ಕೊರೊನಾ ವೈರಸ್ ಬದಲಾಗುತ್ತಾ ಸಾಗಿದಂತೆ ಹೊಸ ಲಸಿಕೆಗಳು ಹಾಗೂ ಚಿಕಿತ್ಸೆಯ ಅಗತ್ಯವಿದೆ ಎಂದೂ ಅಧ್ಯಯನದಲ್ಲಿ ಹೇಳಲಾಗಿದೆ.

ಅಮೆರಿಕದ ಕೊಲಂಬಿಯ ವಿಶ್ವವಿದ್ಯಾನಿಲಯ ಹಾಗೂ ಹಾಂಕಾಂಗ್ ವಿಶ್ವವಿದ್ಯಾನಿಲಯಗಳ ಸಂಶೋಧಕರು ಈ ಅಧ್ಯಯನ ನಡೆಸಿದ್ದಾರೆ. ರೂಪಾಂತರಿಯಲ್ಲಿ ಹೆಚ್ಚಿನ ಸಂಖ್ಯೆಯ ಬದಲಾವಣೆಯಾಗಿರುವುದರಿಂದ ಲಸಿಕೆ (2ನೇ ಪುಟಕ್ಕೆ)

## ಜಗತ್ತು ತಲ್ಲಣಗೊಳ್ಳಲಿದೆ



ರಾಣೇಬೆನ್ನೂರು, ಡಿ. 24- ಜನರಲ್ಲಿ ಸಂಶಯ, ಅಸಹನೆ, ದ್ವೇಷ, ರಾಜಕೀಯ ಕಲಹ ಹೆಚ್ಚಲಿದೆ. ಆಶ್ವೀಜದಿಂದ ಸಂಕ್ರಾಂತಿಯೊಳಗೆ ಇನ್ನೊಂದು ಅವಘಡ ಆಗಲಿದೆ, ಜಗತ್ತು ತಲ್ಲಣಗೊಳ್ಳಲಿದೆ ಎಂದು ಹಾರ್ನಹಳ್ಳಿ ಕೋಡಿಮಠದ ಡಾ. ಶಿವಾನಂದ ರಾಜಯೋಗೀಂದ್ರ ಮಹಾಸ್ವಾಮೀಜಿ ಭವಿಷ್ಯ ನುಡಿದಿದ್ದಾರೆ. ಅವರು ಇಲ್ಲಿನ ಅಜ್ಜಪ್ಪ ಜಂಬಗಿ ಅವರ ಗೃಹದಲ್ಲಿ ಏರ್ಪಡಿಸಿದ್ದ ಪೂಜೆ ನೆರವೇರಿಸಿ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

## ಎಪಿಎಂಸಿಗಳಲ್ಲಿ ಕಮೀಷನ್ ಪಡೆಯದಂತೆ ಸೂಚನೆ

ಬೆಳಗಾವಿ, ಡಿ. 24 - ಎಪಿಎಂಸಿ ಕೇಂದ್ರಗಳಲ್ಲಿ ಮಧ್ಯವರ್ತಿಗಳು ಯಾವುದೇ ಕಾರಣಕ್ಕೂ ರೈತರಿಂದ ಕಮಿಷನ್ ಪಡೆಯದಂತೆ ಸೂಚನೆ ನೀಡಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ವಿಧಾನಸಭೆಗೆ ತಿಳಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ (2ನೇ ಪುಟಕ್ಕೆ)

# ಬಾಲ್ಯ ವಿವಾಹ ಉದಾಸೀನ ಸಲ್ಲ: ಎಸ್ಪಿ ರಿಷ್ಯಂತ್

ದಾವಣಗೆರೆ, ಡಿ. 24 - ಮಹಿಳಾ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ಹಾಗೂ ಬಾಲ್ಯ ವಿವಾಹ ತಡೆಯಲು ಪೊಲೀಸ್ ಇಲಾಖೆ ಸೇರಿದಂತೆ, ಎಲ್ಲ ಇಲಾಖೆಗಳು ಜೊತೆಯಾಗಿ ಕಾರ್ಯ ನಿರ್ವಹಿಸಬೇಕಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಕರೆ ನೀಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಪೊಲೀಸ್, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸುಧಾರಣಾ ಸಂಸ್ಥೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ಕಡಿಮೆ. ಕಳೆದ ವರ್ಷ ಎರಡು ಪ್ರಕರಣಗಳು ಮಾತ್ರ ನಡೆದಿದ್ದವು. ಆದರೆ, ಬಾಲ್ಯ ವಿವಾಹಗಳು ಹೆಚ್ಚಾಗಿ ನಡೆಯುತ್ತಿವೆ. ಬಾಲ್ಯ ವಿವಾಹ ತಪ್ಪು ಎಂದು



ಪೋಷಕರು ಹಾಗೂ ಸಮಾಜದವರು ಭಾವಿಸುವುದಿಲ್ಲ ಎಂದವರು ವಿಷಾದಿಸಿದರು.

ಮದುವೆಯ ನಂತರ ಗರ್ಭಿಣಿಯಾಗಿ ವೈದ್ಯರ ಬಳಿ ಬಂದಾಗಲೇ ಅಪ್ರಾಪ್ತೆಯ ವಿವಾಹವಾಗಿರುವುದು ಗೊತ್ತಾಗುತ್ತದೆ. ಅಲ್ಲಿಯವರೆಗೆ ಊರಿನವರ ಎದುರೇ ಮದುವೆ ನಡೆದಿದ್ದರೂ, ಸಾರ್ವಜನಿಕರು ಉದಾಸೀನತೆ ತೋರಿ, ಆ ಬಗ್ಗೆ ಅಧಿಕಾರಿಗಳು ಹಾಗೂ ಪೊಲೀಸರ ಬಳಿ ವರದಿ ಮಾಡುವುದಿಲ್ಲ. ಈ ಪರಿಸ್ಥಿತಿ ಬದಲಾಗಬೇಕು ಎಂದವರು ಹೇಳಿದರು.

ಬಾಲ್ಯ ವಿವಾಹಕ್ಕೆ ಹತ್ತು ವರ್ಷಗಳವರೆಗಿನ ಜೈಲು ಶಿಕ್ಷೆ ಇದೆ. ಬಾಲ್ಯ ವಿವಾಹ ಮಾಡಿ ಶಿಕ್ಷೆಗೆ ಗುರಿಯಾದವರ ಬಗ್ಗೆ ಹೆಚ್ಚು ಪ್ರಚಾರ ನೀಡಬೇಕು. ಅದು ಉಳಿದವರಿಗೂ ಎಚ್ಚರಿಕೆಯಾಗುತ್ತದೆ ಎಂದು ರಿಷ್ಯಂತ್ ಅಭಿಪ್ರಾಯ ಪಟ್ಟರು. (2ನೇ ಪುಟಕ್ಕೆ)

# ಮಲೇಬೆನ್ನೂರು ಪುರಸಭೆ: ಸೌಲಭ್ಯಗಳಿಗೆ ಹೆಚ್ಚಿನ ಒತ್ತು

**ಪುರಸಭೆ ಚುನಾವಣೆ ಪ್ರಚಾರ ಸಭೆಯಲ್ಲಿ ಸಚಿವ ಭೈರತಿ ಬಸವರಾಜ್ ಭರವಸೆ**

ಮಲೇಬೆನ್ನೂರು, ಡಿ.24- ಜಿಲ್ಲಾ ಉಸ್ತುವಾರಿ ಸಚಿವನಾಗಿ ಜಿಲ್ಲೆಯ ಅಭಿವೃದ್ಧಿ ಜೊತೆಗೆ ಮಲೇಬೆನ್ನೂರು ಪುರಸಭೆಗೆ ಕಾಯಕಲ್ಪ ಕೊಡುವ ಜವಾಬ್ದಾರಿ ನನ್ನದು ಎಂದು ನಗರಾಭಿ ವೃದ್ಧಿ ಸಚಿವರೂ ಆದ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಹೇಳಿದರು.

ಅವರು ಶುಕ್ರವಾರ ಸಂಜೆ ಪಟ್ಟಣದ ಮುಖ್ಯ ವೃತ್ತದಲ್ಲಿ ಹಮ್ಮಿಕೊಂಡಿದ್ದ ಮಲೇಬೆನ್ನೂರು ಪುರಸಭೆಯ ಚುನಾ ವಣಾ ಪ್ರಚಾರದಲ್ಲಿ ಭಾಗವಹಿಸಿ ಮಾತನಾಡಿದರು. ಇಲ್ಲಿನ ಪುರಸಭೆ ಯನ್ನು ಅತ್ಯಾಧು ನಿಕ ಗೊಳಿಸುವ ಮೂಲಕ ಮೂಲಭೂತ ಸೌಲಭ್ಯಗಳಿಗೆ ಹೆಚ್ಚಿನ ಒತ್ತು ನೀಡುವುದಾಗಿ ಭರವಸೆ ನೀಡಿದ ಭೈರತಿ ಬಸವರಾಜ್ ಅವರು ರಾಜ್ಯದ ನಗರ, ಪಟ್ಟಣಗಳ ಅಭಿವೃದ್ಧಿಗಾಗಿ 5140 ಕೋಟಿ ರೂ ಅನುದಾನ ಬಿಡುಗಡೆ ಮಾಡಿದ್ದೇವೆ ಎಂದರು. (2ನೇ ಪುಟಕ್ಕೆ)

## ಕೆ.ಆರ್.ಜಯದೇವಪ್ಪ ನಿಧನಕ್ಕೆ ವಿಧಾನಸಭೆಯಲ್ಲಿ ಶ್ರದ್ಧಾಂಜಲಿ



ಬೆಳಗಾವಿ, ಡಿ. 24 - ರಾಜ್ಯಸಭೆಯ ಮಾಜಿ ಸದಸ್ಯರಾಗಿದ್ದ ಕೆ.ಆರ್.ಜಯದೇವಪ್ಪ ಅವರ ನಿಧನಕ್ಕೆ ವಿಧಾನಸಭೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಬೆಳಗ್ಗೆ ಸದನ ಸಮಾವೇಶಗೊಂಡಾಗ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಂತಾಪ ಸೂಚನಾ ನಿರ್ಣಯವನ್ನು ಕೈಗೆತ್ತಿಕೊಂಡು ಜಯದೇವಪ್ಪ ನಿಧನರಾಗಿರುವುದನ್ನು ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಿದರು.

ಜಯದೇವಪ್ಪನವರು ಮೂಲತಃ ದಾವಣಗೆರೆಯವರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳಲ್ಲೂ ಅಪಾರ ಸೇವೆ ಸಲ್ಲಿಸಿದ್ದರು. 1992ರಿಂದ 98ರ ಅವಧಿಯಲ್ಲಿ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಇವರು ನಿನ್ನೆ ನಿಧನ ಹೊಂದಿದ್ದಾರೆ ಎಂದು ಹೇಳಿದರು.

ಮೃತರ ಗೌರವಾರ್ಥ ಸದನದ ಸದಸ್ಯರೆಲ್ಲರೂ ಎದ್ದು ನಿಂತು ಮೌನ ಆಚರಿಸಿದರು. ಬಳಿಕ ಸಭಾಧ್ಯಕ್ಷರು ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡುವುದಾಗಿ ಪ್ರಕಟಿಸಿದರು.

# ಖಾಸಗಿ ಬಡಾವಣೆಗಳಿಗೆ ಸರ್ಕಾರ ಮೂಲ ಸೌಕರ್ಯ ಕಲ್ಪಿಸುವುದಿಲ್ಲ

> **ಖಾಸಗಿಯವರೇ ಅಭಿವೃದ್ಧಿ ಪಡಿಸಿ ಹಸ್ತಾಂತರಿಸಬೇಕು.**
> **- ಸಚಿವ ಭೈರತಿ ಬಸವರಾಜ**

ಬೆಳಗಾವಿ, ಡಿ. 24 - ಖಾಸಗಿ ಬಡಾವಣೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಶಾಸಕ ತನ್ವೀರ್ ಸೇಠ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಖಾಸಗಿಯವರು ತಾವು ನಿರ್ಮಿಸಿದ ಬಡಾವಣೆ ಗಳಿಗೆ ಚರಂಡಿ, ನೀರು, ರಸ್ತೆ, ವಿದ್ಯುತ್‌ದೀಪ ಅಭಿವೃದ್ಧಿ ಪಡಿಸಿ ನಮಗೆ ಹಸ್ತಾಂತರಿಸಿದರೆ ಮಾತ್ರ ನಾವು ಅಗತ್ಯ ವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡು ತ್ತೇವೆ. ಆದರೆ ಇದನ್ನು ಪೂರೈಸದ ಬಡಾವಣೆಗಳಿಗೆ ಕಲ್ಪಿಸಿಕೊಡಲು ಸಾಧ್ಯವೇ ಇಲ್ಲ ಎಂದು ಹೇಳಿದರು.

ಖಾಸಗಿಯವರು ಗ್ರಾಮ ಪಂಚಾಯ್ತಿ, ಪುರಸಭೆ, ಪಟ್ಟಣ ಪಂಚಾಯಿತಿ, ನಗರಸಭೆ ಮತ್ತು ಮಹಾನಗರ ಪಾಲಿಕೆಗಳಲ್ಲಿ ಮಾಡಿಕೊಂಡ ಮೂಲ ಒಪ್ಪಂದದಂತೆ ಬಡಾವಣೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು.

ಈಗಾಗಲೇ ನಿರ್ಮಾಣ ಮಾಡಿರುವ ಬಡಾವಣೆಗಳಿಗೆ ಯಾವ ರೀತಿ ಕ್ರಮ ಕೈಗೊಳ್ಳಬೇಕು ಎಂಬುದರ ಕುರಿತಾಗಿ ಶೀಘ್ರದಲ್ಲೇ ಅಧಿಕಾರಿಗಳ ಜೊತೆ ಸಭೆ ನಡೆಸುವುದಾಗಿ ಹೇಳಿದರು. ಪ್ರಾರಂಭ ದಲ್ಲಿ ಖಾಸಗಿಯವರು ಎಲ್ಲ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಾಗಿ ಒಪ್ಪಂದ ಮಾಡುತ್ತಾರೆ. ಆದರೆ ಇಲಾಖೆಯ ಸಂಬಂಧಪಟ್ಟವರಿಂದ ಯೋಜನೆಗೆ ಅನುಮೋದನೆ ಪಡೆಯುತ್ತಿದ್ದಂತೆ ಯಾವುದೇ ಒಪ್ಪಂದಗಳನ್ನು ಪೂರೈಸುವುದಿಲ್ಲ. (2ನೇ ಪುಟಕ್ಕೆ)

# ಅತಿಹೆಚ್ಚು ಕಬ್ಬು ಅರೆದ ಉತ್ತೂರಿನ ಐಸಿಪಿಎಲ್ ಕಂಪನಿ



**ಎಸ್ಸೆಸ್, ಎಸ್ಸೆಸ್ಸೆಂಗೆ ರೈತರಿಂದ ಸನ್ಮಾನ**

ದಾವಣಗೆರೆ, ಡಿ. 24- ಅತಿಹೆಚ್ಚು ಕಬ್ಬು ಅರೆದ ಮುಧೋಳ್ ತಾಲ್ಲೂಕಿನ ಉತ್ತೂರು ಗ್ರಾಮದಲ್ಲಿ ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಒಡೆತನದಲ್ಲಿ ನಡೆಯುತ್ತಿರುವ ಇಂಡಿಯನ್ ಕೇನ್ ಪವರ್ ಲಿಮಿಟೆಡ್ (ಐಸಿಪಿಎಲ್)ನಲ್ಲಿ 50 ದಿನಗಳಲ್ಲಿ 10 ಲಕ್ಷ ಟನ್ ಕಬ್ಬು ಅರೆಯಲಾಗಿದ್ದು, ಇದು ಏಷ್ಯಾದಲ್ಲೇ ಅತಿ ಹೆಚ್ಚು ಕಬ್ಬು ಅರೆಯುವಿಕೆಯಾಗಿದೆ.

ಈ ಹಿನ್ನೆಲೆಯಲ್ಲಿ ಸ್ಥಳೀಯ ರೈತ ಮುಖಂಡರು ಕಂಪನಿಯ ಛೇರ್ಮನ್ (2ನೇ ಪುಟಕ್ಕೆ)




**ಶ್ಯಾಬನೂರಿನಲ್ಲಿ ಇಂದು ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವ**
ದಿನಾಂಕ 25ರ ಶನಿವಾರ ಸಂಜೆ
ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ...
ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ, ಶ್ಯಾಬನೂರು.


# ಗ್ರಾಹಕರು ಜಾಗೃತರಾದಾಗ ಮಾತ್ರ ಶೋಷಣೆ ತಪ್ಪಿಸಲು ಸಾಧ್ಯ

## ರಾಷ್ಟ್ರೀಯ ಗ್ರಾಹಕರ ದಿನಾಚರಣೆಯಲ್ಲಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಗೋಖಲೆ ಫಾಳಪ್ಪ

ದಾವಣಗೆರೆ, ಡಿ.24- ಗ್ರಾಹಕರು ಜಾಗೃತಗೊಂಡಾಗ ಮಾತ್ರ ತಮಗಾಗುವ ಅನ್ಯಾಯ, ವಂಚನೆ, ಶೋಷಣೆಯಿಂದ ಹೊರಬರಲು ಸಾಧ್ಯ ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಗೋಖಲೆ ಫಾಳಪ್ಪ ಹೇಳಿದರು.

ಜಿಲ್ಲಾಡಳಿತ, ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜನತಾ ಬಜಾರ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಹಕರು ತಾವು ಕೊಳ್ಳುವ ವಸ್ತುಗಳ ಬೆಲೆ, ಗುಣಮಟ್ಟ, ಪ್ರಮಾಣ, ಪ್ರಮುಖ ಅಂಶಗಳ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸುವ ಅಗತ್ಯವಿದೆ. ಜೊತೆಗೆ ಖರೀದಿಸಿದ್ದಕ್ಕೆ



ಪ್ರತಿಯಾಗಿ ಅಧಿಕೃತ ರಸೀದಿ ಪಡೆಯುವುದನ್ನು ಯಾರೂ ಮರೆಯಬಾರದು ಎಂದರು.

ವಿವಿಧ ವ್ಯವಹಾರಗಳಲ್ಲಿ ವಂಚನೆ, ಅನ್ಯಾಯ, ಮೋಸಕ್ಕೆ ಒಳಗಾಗುವ ಗ್ರಾಹಕರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ನೀಡುವ ಮೂಲಕ ತ್ವರಿತಗತಿಯಲ್ಲಿ ಪರಿಹಾರ ಪಡೆದುಕೊಳ್ಳಬಹುದಾಗಿದೆ ಎಂದು ಮಾಹಿತಿ ನೀಡಿದರು.

ದಾವಣಗೆರೆ ಜಿಲ್ಲೆಯಲ್ಲಿ ಈ ರೀತಿ ದೂರು ಸಲ್ಲಿಕೆಯಾಗುವುದೇ ವಿರಳವಾಗಿದೆ. ಇದಕ್ಕೆ ಗ್ರಾಹಕರ ತಾತ್ಸಾರ ಮನೋಭಾವನೆ ಕಾರಣ ಎಂದು ತಿಳಿಸಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯೆ ಜ್ಯೋತಿ ರಾಧೇಶ್ ಜಂಬಿಗಿ ಮಾತನಾಡಿ, ಗ್ರಾಹಕರ ರಕ್ಷಣಾ ಕಾಯಿದೆಗೆ 2019 ರಲ್ಲಿ ತಿದ್ದುಪಡಿ ತರುವ ಮೂಲಕ ಗ್ರಾಹಕರಿಗೆ ಇನ್ನಷ್ಟು ರಕ್ಷಣೆ ಹಾಗೂ ಹಕ್ಕು ದೊರೆತಂತಾಗಿದೆ. ಮೊದಲಿದ್ದ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಇದೀಗ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವಾಗಿ ಬದಲಾಗಿದೆ ಎಂದರು.

ಜಿಲ್ಲಾ ವ್ಯಾಪ್ತಿಯಲ್ಲಿ 20 ಸಾವಿರ ರೂ. ಪರಿಹಾರದ ಮಿತಿಯನ್ನು 1 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. 5 ಲಕ್ಷ ರೂ.ಗಳವರೆಗಿನ ಖರೀದಿ, ಸೇವಾ ನ್ಯೂನತೆಗೆ ಸಂಬಂಧಿಸಿದಂತೆ ದೂರು ಸಲ್ಲಿಸಲು ಯಾವುದೇ ಶುಲ್ಕವಿರುವುದಿಲ್ಲ, 5 ಲಕ್ಷದಿಂದ 10 ಲಕ್ಷದವರೆಗೆ 200 ರೂ. ಶುಲ್ಕ, 10 ಲಕ್ಷದಿಂದ 20 ಲಕ್ಷದವರೆಗೆ 400 ರೂ., 20 ಲಕ್ಷದಿಂದ 50 ಲಕ್ಷ ರೂ.ಗಳವರೆಗೆ 1000 ರೂ., 50 ಲಕ್ಷದಿಂದ 1 ಕೋಟಿ ರೂಗಳವರೆಗೆ 2000 ರೂ. ಶುಲ್ಕ ವಿಧಿಸಲಾಗುವುದು ಎಂದು ವಿವರ ನೀಡಿದರು.

ಕಾನೂನು ಮಾಪನ ಶಾಸ್ತ್ರ ಇಲಾಖೆ ಸಹಾಯಕ ನಿಯಂತ್ರಕ ಹೆಚ್.ಎಸ್. ರಾಜು ಗ್ರಾಹಕರಿಗೆ ಉಪಯುಕ್ತ ಮಾಹಿತಿ ನೀಡಿದರು. ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ನಿವೃತ್ತ ವ್ಯವಸ್ಥಾಪಕ ಪಿ. ಅಂಜಿನಪ್ಪ ಉಪನ್ಯಾಸ ನೀಡಿದರು.

ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರದ ಅಧ್ಯಕ್ಷೆ ಹೆಚ್. ಅನಿತಾ ಉಪಸ್ಥಿತರಿದ್ದರು. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ ಸಹಾಯಕ ನಿರ್ದೇಶಕ ಬಿ.ಟಿ. ಪ್ರಕಾಶ್ ಪ್ರಾರ್ಥಿಸಿ, ನಿರೂಪಿಸಿದರು, ಜಂಟಿ ನಿರ್ದೇಶಕರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.




**11th Year Memory**
In ever loving Memory of
Smt. K.L. Yashodha
w/o Late Sri B.K.G. Lakshman Setty
Who left us on 25.12.2010

Smt. K.L. Yashodha
24.12.1932 - 25.12.2010
9/2971, 'Sri' Nivas' 6th Main,
MCC'B' Block, Davangere-4.

Daughters and Son's In-Law
Smt. Geetha Srinivasulu, Hospet
Smt. Dr. Sunitha & Sri T.V. Sushil Kumar, Lincolnshire, U.K.
Smt. Sadhana & Sri Nagendra Prasad, Mysore
Smt. Dr. Vandana & Sri Dr. Rajendra Desai, Davangere.
Smt. Lakshmi & Sri Sreeram, Sydney, Australlia
Grand Children :
Sindhu, Santosh, Sripal, Teju, Shantanu And Pooja

# ಬುದ್ಧ, ಅಂಬೇಡ್ಕರ್ ನ್ಯಾಯ ಮಾರ್ಗ ಬೇಕಿದೆ

## ಹರಿಹರದಲ್ಲಿನ ಆರೋಗ್ಯ ಶಿಬಿರ ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕ, ನಟ ಚೇತನ್



ಹರಿಹರ, ಡಿ24- ಸೌಹಾರ್ದ ಶಕ್ತಿಯಿಂದ ಬಡವರ ಬೆಳವಣಿಗೆ ಸಾಧ್ಯವಿದೆ. ಸಮಾನತೆಯ ಸಿದ್ಧಾಂತದಲ್ಲಿ ಸಾಗಿದ ಬುದ್ಧ, ಬಸವ, ಪೆರಿಯಾರ್, ಡಾ. ಬಿ. ಆರ್. ಅಂಬೇಡ್ಕರ್, ಕುವೆಂಪುರವರ ನ್ಯಾಯ ಮಾರ್ಗದರ್ಶನ ಅವಶ್ಯಕತೆ ಇದೆ ಎಂದು ಪ್ರಗತಿಪರ ಚಿಂತಕ ಹಾಗೂ ಚಲನಚಿತ್ರ ನಟ ಚೇತನ್ ಹೇಳಿದ್ದಾರೆ.

ನಗರದ ಅಕ್ಷಯ ಆಸ್ಪತ್ರೆ ಮುಂಭಾಗದಲ್ಲಿ ಇಂದು ನಡೆದ ಡಾ ಬಿ.ಆರ್. ಅಂಬೇಡ್ಕರ್ ಅವರ ಮಹಾ ಪರಿನಿಬ್ಬಾಣ ದಿನದ ಅಂಗವಾಗಿ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ) ಹಾಗೂ ಅಕ್ಷಯ ಆಸ್ಪತ್ರೆ ವತಿಯಿಂದ ನಡೆದ ಆರೋಗ್ಯ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶತ್ರು ಯಾರು ಎಂದು ಗುರುತಿಸದೇ ಹೋದರೆ ಬದುಕು ಛಿದ್ರವಾಗುತ್ತದೆ. ಕೋಮವಾದಿ ವ್ಯವಸ್ಥೆ ಮತ್ತು ಶ್ರೇಷ್ಠ, ಕನಿಷ್ಠ ಎಂಬ ವ್ಯವಸ್ಥೆ ವಿರುದ್ಧ ಹೋರಾಡಬೇಕಾಗಿದೆ. ನಾವು ಹೆಚ್ಚು ಎಂದು ದಬ್ಬಾಳಿಕೆ, ದೌರ್ಜನ್ಯ ಮಾಡುವುದಕ್ಕೆ ಅವಕಾಶ ಕೊಡದೆ ಸರಿ ಸಮಾನತೆಯ ವ್ಯವಸ್ಥೆ ಬರಬೇಕಾಗಿದೆ ಎಂದವರು ಆಶಿಸಿದ್ದಾರೆ.

> ರಾಜ್ಯದಾದ್ಯಂತ ಶಾಲೆಗಳಲ್ಲಿ ಪಡೆಯುವ ಡೊನೇಷನ್ ವಿರುದ್ಧ ಯಾವುದೇ ಮಠಾಧೀಶರು ಹೋರಾಟ ಮಾಡುವುದಕ್ಕೆ ಸಿದ್ದರಿಲ್ಲ. ಮಕ್ಕಳ ಮೇಲೆ ಅತ್ಯಾಚಾರ ನಡೆದರೆ ಅದರ ವಿರುದ್ಧ ಹೋರಾಟ ಮಾಡುತ್ತಿಲ್ಲ. ದಲಿತರಿಗೆ ಶವ ಸಂಸ್ಕಾರ ಮಾಡಲು ಜಾಗವಿಲ್ಲ, ಇದರ ವಿರುದ್ಧ ಹೋರಾಡಲು ಸಿದ್ದವಿಲ್ಲ. ಆದರೆ, ಶಾಲೆಯಲ್ಲಿ ಮಕ್ಕಳಿಗೆ ವಿತರಣೆ ಮಾಡುವ ಮೊಟ್ಟೆಗೆ ವಿರೋಧ ಮಾಡುತ್ತಾರೆ.
>
> - ಎಂ. ಗುರುಮೂರ್ತಿ, ರಾಜ್ಯ ಸಂಚಾಲಕರು, ದಲಿತ ಸಂಘರ್ಷ ಸಮಿತಿ

ದೇಶದಲ್ಲಿ ಶೇ. 1 ರಷ್ಟು ಇರುವ ಜನರು ಶೇ. 60 ರಷ್ಟು ಆಸ್ತಿಯನ್ನು ಹೊಂದಿದ್ದಾರೆ. ಸಮಾಜದಲ್ಲಿ ಪುರುಷರಿಗೆ ಸಿಗುವ ಗೌರವ, ಸ್ಥಾನಮಾನಗಳು ಮಹಿಳೆಯರಿಗೆ ಸಿಗುವಂತಾಗಬೇಕು. ಸ್ಥಿರ ಸಂಸ್ಕೃತಿ ವಿರುದ್ಧ ನಿಲ್ಲಬೇಕು ಎಂದವರು ಹೇಳಿದರು.

ನಾನು ಯಾವ ಧರ್ಮವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಹಕ್ಕಿದೆ. ಅದನ್ನು ನಿಷೇಧ ಮಾಡುವವರ ವಿರುದ್ಧ ದೊಡ್ಡ ಮಟ್ಟದಲ್ಲಿ ಹೋರಾಡ ಬೇಕಿದೆ. ವಾಕ್ ಸ್ವಾತಂತ್ರ್ಯ ತರಬೇಕು. ಅದರಿಂದ ಉತ್ತಮ ಸಮಾಜ ಕಟ್ಟಲು ಸಾಧ್ಯವಿದೆ ಎಂದು ಹೇಳಿದರು.

ಅಕ್ಷಯ ಆಸ್ಪತ್ರೆ ಮುಖ್ಯಸ್ಥ ಡಾ ವಿ.ಟಿ. ನಾಗರಾಜ್ ಮಾತನಾಡಿ, ರೋಗಿಗಳಿಗೆ ತಪಾಸಣೆ ಮಾಡಿ ಚಿಕಿತ್ಸೆ ಕೊಡುವುದು ವೈದ್ಯರ ಧರ್ಮ. ಕೊರೊನಾ ಸಮಯದಲ್ಲಿ ವೈದ್ಯರು ತಮ್ಮ ಜೀವದ ಹಂಗು ತೊರೆದು ತಮ್ಮ ವೃತ್ತಿಯಲ್ಲಿ ತೊಡಗಿಸಿ ಕೊಂಡಿದ್ದರಿಂದ ಹೆಚ್ಚು ಅನಾಹುತಗಳು ಆಗದಂತೆ ತಡೆಯಲು ಸಾಧ್ಯವಾಯಿತು ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ ಸೀಮಾ ವಿ.ಟಿ. ನಾಗರಾಜ್, ಎಸ್.ಬಿ.ಪಿ.ಐ. ರಾಜ್ಯ ಕಾರ್ಯದರ್ಶಿ ಭಾಸ್ಕರ್ ಪ್ರಸಾದ್, ಹರಿಹರ ತಾಲ್ಲೂಕು ದಲಿತ ಸಂಘರ್ಷ ಸಮಿತಿ ಸಂಚಾಲಕ ಪಿ.ಜೆ. ಮಹಾಂ ತೇಶ್, ನಾಗನಗೌಡ, ಜಿಲ್ಲಾ ಮಹಿಳಾ ಸಂಚಾಲಕಿ ವಿಜಯಲಕ್ಷ್ಮಿ, ಫೈಯಾಜ್ ಆಹ್ಮದ್, ಅಜಯ್, ವೀರೇಶ್, ಮಾಜಿ ನಗರಸಭೆ ನಾಮನಿರ್ದೇಶನ ಸದಸ್ಯ ವಸಂತ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಅಧಿಕಾರಸ್ಥ ಮಹಿಳೆಯರು ತಾವು 'ರಬ್ಬರ್ ಸ್ಟ್ಯಾಂಪ್‌ಗಳಲ್ಲ' ಎಂದು ಸಾಬೀತುಪಡಿಸಿ




ಹೊನ್ನಾಳಿ,ಡಿ.24- ಅಧಿಕಾರಸ್ಥ ಮಹಿಳೆಯರು ಸಂಬಂಧಿಸಿದ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುವ ಮೂಲಕ, ತಾವು ರಬ್ಬರ್ ಸ್ಟ್ಯಾಂಪ್‌ಗಳಲ್ಲ ಎಂಬುದನ್ನು ಸಾಬೀತುಪಡಿಸಬೇಕು ಎಂದು ಗ್ರಾಮ ಸಂಪನ್ಮೂಲ ವ್ಯಕ್ತಿ ಚಂದ್ರಕಲಾ ಹೇಳಿದರು.

ಇಲ್ಲಿನ ಚನ್ನಮಲ್ಲಿಕಾರ್ಜುನ ಸ್ವಾಮಿ ಸಂಸ್ಕೃತ ಮಹಾವಿದ್ಯಾಲಯದ ಎನ್ನೆಸ್ಸೆಸ್ ಘಟಕದ ವತಿಯಿಂದ ಇಲ್ಲಿನ ಹಿರೇಕಲ್ಮಠದ ಶ್ರೀಮತಿ ಗಂಗಮ್ಮ ಶ್ರೀ ವೀರಭದ್ರಶಾಸ್ತ್ರಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜಕೀಯ ಕ್ಷೇತ್ರದಲ್ಲಿ ಹೆಚ್ಚೆಚ್ಚು ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

ತರಬೇತಿ ಕೇಂದ್ರದ ಪ್ರಾಂಶುಪಾಲ ಜಗದೀಶ್ ಮೋತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸಂಸ್ಕೃತ ಮಹಾವಿದ್ಯಾಲಯದ ಪ್ರಾಂಶುಪಾಲ ಎಚ್.ಎಂ. ಗುರುಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು.

ಸಂಪನ್ಮೂಲ ವ್ಯಕ್ತಿ ಯುವರಾಜ್ ಎಂ.ಜಕ್ಕಾಳಿ, ಗಂಗಮ್ಮ, ರಾಮಚಂದ್ರಪ್ಪ ಕಡೇಮನಿ, ಕೋರಿ ಯೋಗೀಶ್ ಕುಳಗಟ್ಟೆ, ಮುಖ್ಯ ಶಿಕ್ಷಕ ನಿಜಗುಣ ಶಿವಯೋಗಿ, ಟಿ. ಶಿವರಾಜ್, ಎನ್ನೆಸ್ಸೆಸ್ ಅಧಿಕಾರಿ ಪ್ರತಿಮಾ ನಿಜಗುಣ ಶಿವಯೋಗಿ, ಎಲ್.ಆರ್. ಅಪೇಕ್ಷಾ, ಮಂಗಳ ಗೌರಮ್ಮ ಇತರರು ಇದ್ದರು.

## ರಾಣೇಬೆನ್ನೂರಿಗೆ ಇಂದು ವಾಲ್ಮೀಕಿ ಜಗದ್ಗುರು



ವಾಲ್ಮೀಕಿ ಮಹಾಸಭಾ ರಾಣೇಬೆನ್ನೂರು ಘಟಕದ ವತಿಯಿಂದ ಮಹರ್ಷಿ ವಾಲ್ಮೀಕಿ ಭವನದಲ್ಲಿ ವಿವಿಧ ಸಂಘಟನೆಗಳಿಗೆ ಆಯ್ಕೆಯಾಗಿರುವ ಸಮಾಜದ ಪದಾಧಿಕಾರಿಗಳು, ವಿವಿಧ ಸಾಧಕರಿಗೆ ಇಂದು ನಡೆಯಲಿರುವ ಸನ್ಮಾನ ಸಮಾರಂಭದಲ್ಲಿ ರಾಜನಹಳ್ಳಿ ವಾಲ್ಮೀಕಿ ಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸುವರು.

# ಮೂಲ ಸೌಕರ್ಯ ಕಲ್ಪಿಸುವುದಿಲ್ಲ

**(1ನೇ ಪುಟದಿಂದ)** ಇದಕ್ಕೆ ಕಡಿವಾಣ ಹಾಕಲು ಸದ್ಯದಲ್ಲೇ ಸಭೆ ನಡೆಸಲಾಗುವುದು ಎಂದರು. ಖಾಸಗಿ ಬಡಾವಣೆ ನಿರ್ಮಾಣದಾರರು ಒಂದು ವೇಳೆ ಮೂಲ ಒಪ್ಪಂದವನ್ನು ಭರ್ತಿ ಮಾಡಲು ಹಿಂದೇಟು ಹಾಕಿದರೆ ಅಂಥವರ ವಿರುದ್ಧ ಕಾನೂನು ಜರುಗಿಸಲಾಗುವುದು. ನಮ್ಮ ಮಾನದಂಡಗಳು ಏನಿರುತ್ತವೆಯೋ ಅವೆಲ್ಲವನ್ನೂ ಭರ್ತಿ ಮಾಡಬೇಕು ಎಂದರು.

ಇದಕ್ಕೂ ಮುನ್ನ ಶಾಸಕ ತನ್ವೀರ್ ಸೇಠ್ ಮಾತನಾಡಿ, ಎಲ್ಲೆಂದರಲ್ಲಿ ಬಡಾವಣೆಗಳನ್ನು ನಿರ್ಮಿಸಲು ಖಾಸಗಿಯವರಿಗೆ ಅನುಮತಿ ಕೊಡುತ್ತೀರ. ಆದರೆ ಅವರು ತಮಗೆ ಬೇಕಾದಂತೆ ಬಡಾವಣೆಗಳನ್ನು ನಿರ್ಮಿಸಿ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವುದಿಲ್ಲ. ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು ಎಂದಿದ್ದರು.

ಇದಕ್ಕೆ ದನಿಗೂಡಿಸಿದ ಕುಮಾರ್ ಬಂಗಾರಪ್ಪ, ಅಧಿಕಾರಿಗಳು ಮಾಡುವ ಬೇಜವಾಬ್ದಾರಿಯಿಂದಾಗಿ ಮನೆ ಕಟ್ಟುವವರು, ನಿವೇಶನ ನಿರ್ಮಿಸುವವರು ಹಣ ಕಟ್ಟಿ ಪರದಾಡುವಂತೆ ಮಾಡುತ್ತಾರೆ. ಇದಕ್ಕೆ ಸರ್ಕಾರ ವಿಶೇಷವಾದ ಗಮನಹರಿಸಬೇಕೆಂದು ಸಲಹೆ ಕೊಟ್ಟರು.

# ನುಣುಚಿಕೊಳ್ಳುವ ರೂಪಾಂತರಿ

**(1ನೇ ಪುಟದಿಂದ)** ಹಾಗೂ ಆಂಟಿಬಡಿ ಚಿಕಿತ್ಸೆಗಳ ಪರಿಣಾಮ ಕಡಿಮೆಯಾಗಿದೆ ಎಂದು ತಿಳಿಸಲಾಗಿದೆ.

ಎರಡು ಡೋಸ್ ಮೊಡೆರ್ನ, ಫೈಜರ್, ಅಸ್ಟ್ರಾಜೆನೆಕಾ ಹಾಗೂ ಜಾನ್ಸನ್ ಮತ್ತು ಜಾನ್ಸನ್ ಲಸಿಕೆ ಪಡೆದವರನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಲಸಿಕೆ ಪಡೆದವರು ಹಾಗೂ ಸಹಜ ಸೋಂಕಿಗೆ ಗುರಿಯಾದವರಿಬ್ಬರ ಆಂಟಿಬಡಿಗಳೂ ಸಹ ಓಮಿಕ್ರಾನ್ ಎದುರು ಕಡಿಮೆ ಪರಿಣಾಮಕಾರಿ ಎಂಬುದು ಕಂಡುಬಂದಿದೆ.

ಫೈಜರ್ ಇಲ್ಲವೇ ಮೊಡೆರ್ನ ಬೂಸ್ಟರ್ ಪಡೆದವರು ತುಸು ಹೆಚ್ಚು ರಕ್ಷಣೆ ಪಡೆದಿದ್ದಾರೆ. ಆದರೆ, ಇವರಲ್ಲೂ ಸಹ ಆಂಟಿಬಡಿಗಳು ಓಮಿಕ್ರಾನ್ ವಿರುದ್ಧ ಕಡಿಮೆ ಪರಿಣಾಮಕಾರಿಯಾಗಿವೆ.

ಎರಡು ಡೋಸ್ ಲಸಿಕೆ ಪಡೆದವರು ಹಾಗೂ ಈ ಹಿಂದೆ ಸೋಂಕಿಗೆ ಗುರಿಯಾದವರಿಗೂ ಸಹ ಮತ್ತೆ ಸೋಂಕಿಗೆ ಸಿಲುಕುವ ಅಪಾಯ ಇದೆ. ಬೂಸ್ಟರ್ ಡೋಸ್ ಸಹ ಓಮಿಕ್ರಾನ್ ವಿರುದ್ಧ ಸಮರ್ಪಕವಲ್ಲ. ಆದರೂ ಮೂರನೇ ಡೋಸ್ ಲಸಿಕೆ ಪಡೆಯುವುದರಿಂದ ಸ್ವಲ್ಪ ಸುರಕ್ಷತೆ ಸಿಗುತ್ತದೆ ಎಂದು ಕೊಲಂಬಿಯ ವಿಶ್ವವಿದ್ಯಾನಿಲಯದ ಪ್ರೊ. ಡೇವಿಡ್ ಹೊ ತಿಳಿಸಿದ್ದಾರೆ.

ಕೊರೊನಾ ವೈರಸ್ ಇನ್ನು ಒಂದೆರಡು ರೂಪಾಂತರಿಯಾದ ನಂತರ ಈಗಿರುವ ಆಂಟಿಬಡಿಗಳಿಂದ ಸಂಪೂರ್ಣ ನುಣುಚಿಕೊಳ್ಳುತ್ತದೆ ಎಂದು ಹೇಳುವುದು ಅತಿಶಯೋಕ್ತಿ ಅಲ್ಲ ಎಂದು ಡೇವಿಡ್ ಹೊ ತಿಳಿಸಿದ್ದಾರೆ.

# ಬಾಲ್ಯ ವಿವಾಹ ಉದಾಸೀನ ಸಲ್ಲ

**(1ನೇ ಪುಟದಿಂದ)** ಬಾಲ ಕಾರ್ಮಿಕ ಪದ್ಧತಿಯಿಂದ ಮಕ್ಕಳ ಬೆಳವಣಿಗೆ ಕುಂಠಿತವಾಗುತ್ತದೆ. ಎಲ್ಲ ಮಕ್ಕಳಿಗೂ ಓದುವ ಅವಕಾಶ ಸಿಗಬೇಕು. ಬಾಲ ಕಾರ್ಮಿಕ ಪದ್ಧತಿ ತಪ್ಪಿಸಲು ಆಪರೇಷನ್ ಮುಸ್ಕಾನ್ ಸೇರಿದಂತೆ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಎಂದವರು ತಿಳಿಸಿದರು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲೆಯಲ್ಲಿ ಆಗಾಗ ಅನೈತಿಕ ಸಾಗಾಣಿಕೆ ಪ್ರಕರಣಗಳು ವರದಿಯಾಗುತ್ತಿವೆ. ಇಂತಹ ಪ್ರಕರಣಗಳನ್ನು ಸಂಪೂರ್ಣ ನಿಲ್ಲಿಸಲು ಎಚ್ಚರಿಕೆ ವಹಿಸಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ, ಉತ್ತರ ಕರ್ನಾಟಕದಲ್ಲಿ ಸಾಮಾಜಿಕ - ಆರ್ಥಿಕ ಕಾರಣದಿಂದಾಗಿ ಅನೈತಿಕ ಸಾಗಾಣಿಕೆ ನಡೆಯುತ್ತಿದೆ. ಇಂತಹ ಘಟನೆಗಳು ನಡೆಯುವುದು ತೀರಾ ಕಡಿಮೆ. ಅಪರೂಪಕ್ಕೆ ನಡೆಯುವ ಪ್ರಕರಣಗಳನ್ನೂ ತಡೆಯಲು ಮುಂದಾಗಬೇಕಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಕೆ.ಹೆಚ್. ವಿಜಯಕುಮಾರ್, ಸಂಪನ್ಮೂಲ ವ್ಯಕ್ತಿಗಳಾದ ಯುನಿಸೆಫ್‌ನ ಕೆ. ರಾಘವೇಂದ್ರ ಭಟ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಮಲೇಬೆನ್ನೂರು ಪುರಸಭೆ: ಸೌಲಭ್ಯಗಳಿಗೆ ಹೆಚ್ಚಿನ ಒತ್ತು




**(1ನೇ ಪುಟದಿಂದ)** ನಾನು, ಮುನ್ನಿರತ್ನ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾಗಿ ಜನಸೇವೆ ಆರಂಭಿಸಿ ಈಗ ಸಚಿವರಾಗಿ ನಿಮ್ಮ ಮುಂದೆ ಇದ್ದೇವೆ. ಜನನಾಯಕರಾಗಿ ಬೆಳೆಯಲು ಸ್ಥಳೀಯ ಸಂಸ್ಥೆಗಳು ಮುಖ್ಯವಾಗಿವೆ. ಮಲೇಬೆನ್ನೂರು ಪುರಸಭೆಗೆ ಸ್ಪರ್ಧಿಸಿರುವ ಬಿಜೆಪಿಯ ಎಲ್ಲಾ 14 ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಪಟ್ಟಣದ ಅಭಿವೃದ್ಧಿಗೆ ಮುನ್ನುಡಿ ಬರೆಯಿರಿ ಎಂದು ಜನತೆಯಲ್ಲಿ ಸಚಿವ ಭೈರತಿ ಬಸವರಾಜ್ ಮನವಿ ಮಾಡಿದರು.

ಸಂಸದ ಜಿ.ಎಂ.ಸಿದ್ದೇಶ್ವರ ಮಾತನಾಡಿ, ಇಲ್ಲಿನ ಪುರಸಭೆಗೆ 14 ಮತ್ತು 15ನೇ ಹಣಕಾಸು ಯೋಜನೆಯಡಿ ಕೇಂದ್ರ ಸರ್ಕಾರದಿಂದ 5 ಕೋಟಿ ರೂ ಅನುದಾನ ಬಂದಿದೆ. ಹರೀಶ್ ಅವರು ಶಾಸಕರಾಗಿದ್ದಾಗ ಮಲೇಬೆನ್ನೂರು ಅಭಿವೃದ್ಧಿಗೆ ಸಿಎಂ ಯಡಿಯೂರಪ್ಪ ಅವರ ಮೇಲೆ ಒತ್ತಡ ಹಾಕಿ ಎರಡೂವರೆ ಕೋಟಿ ರೂ. ವಿಶೇಷ ಅನುದಾನ ತಂದು ಕಾಂಕ್ರೀಟ್ ರಸ್ತೆ, ಚರಂಡಿಗಳನ್ನು ಮಾಡಿದ್ದು ಬಿಟ್ಟರೇ ಇದುವರೆಗೂ ಯಾವ ಶಾಸಕರೂ ವಿಶೇಷ ಅನುದಾನ ತಂದಿಲ್ಲ, ಮಲೇಬೆನ್ನೂರು ಬಿಜೆಪಿಯನ್ನು ಸ್ವತಂತ್ರವಾಗು ಅಧಿಕಾರಕ್ಕೆ ತಂದರೆ ಮತ್ತೆ ವಿಶೇಷ ಅನುದಾನವನ್ನು ಕೊಡಿಸುವ ಜವಾಬ್ದಾರಿ ನನ್ನದು ಎಂದು ಭರವಸೆ ನೀಡಿದ ಸಿದ್ದೇಶ್ವರ, ಮಲೇಬೆನ್ನೂರು ಪುರಸಭೆಯಲ್ಲಿ ಕಾಂಗ್ರೆಸ್-ಜೆಡಿಎಸ್ ಒಂದಾಗಿ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದ್ದು, ಅದಕ್ಕೆ ಅವಕಾಶ ಕೊಡಬೇಡಿ. ಮುಸ್ಲಿಂ ಬಾಂಧವರೂ ಸೇರಿದಂತೆ ಎಲ್ಲ ಜನರ ಮನವೊಲಿಸಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿ ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಹೇಳಿಕೊಳ್ಳುವಂತಹ ಯಾವುದೇ ಅಭಿವೃದ್ಧಿ ಕೆಲಸ ಮಾಡದ ಮಾಜಿ ಶಾಸಕ ಶಿವಶಂಕರ್ ಎಲ್ಲಾ ನಾನೇ ಮಾಡಿದ್ದು ಎಂದು ಸುಳ್ಳು ಹೇಳುತ್ತಾ ಹೊರಟಿರುವುದು ಅವರ ಹತಾಶೆಯನ್ನು ಎತ್ತಿ ತೋರಿಸುತ್ತದೆ. ಶಾಸಕ ರಾಮಪ್ಪ ಹೇಳಿರುವಂತೆ ಕೊರೊನಾ ಕಾರಣದಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ಅನುದಾನ ಬಿಡುಗಡೆಯಾಗಿಲ್ಲ ಎನ್ನುವುದು ಸತ್ಯ ಎಂದರು.

ತೋಟಗಾರಿಕೆ ಸಚಿವ ಮುನಿರತ್ನ, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ ಮತ್ತಿತರರು ಮಾತನಾಡಿದರು.

ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್ ಸಭೆಯ ಅಧ್ಯಕ್ಷತೆ ವಹಿಸಿದ್ದರು, ಬಿಜೆಪಿ ಮುಖಂಡ ಚಂದ್ರಶೇಖರ್ , ಮಾಜಿ ಮೇಯರ್ ಅಜಯ್ ಕುಮಾರ್, ಜಿಲ್ಲಾ ಬಿಜೆಪಿ ಪ್ರ. ಕಾರ್ಯದರ್ಶಿ ಬಿ.ಎಸ್. ಜಗದೀಶ್, ಬಿಜೆಪಿ ಚುನಾವಣಾ ಉಸ್ತುವಾರಿಗಳಾದ ಮಂಜಾನಾಯ್ಕ್, ಅರಕೆರೆ ಹನುಮಂತಪ್ಪ, ಮುಖಂಡರಾದ ಕೆ.ಜಿ. ವೀರನಗೌಡ, ಬೆಣ್ಣೆ ಹಳ್ಳಿ ರಾಜಣ್ಣ, ಕೆಂಚನಹಳ್ಳಿ ಮಹಾಂತೇಶ್, ಆದಾಪುರ ವೀರೇಶ್, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ, ಬಿಜೆಪಿ ಅಭ್ಯರ್ಥಿಗಳಾದ ಆನಂದಾಚಾರ್, ಚಂದ್ರಮ್ಮ ಕೋಂ ಚಂದ್ರಪ್ಪ, ಬೆಣ್ಣೆಹಳ್ಳಿ ಸಿದ್ದೇಶ್, ಮೀನಾಕ್ಷಮ್ಮ ಜಿಗಳೇರ ಹಾಲೇಶಪ್ಪ, ಸುಲೋಚನಮ್ಮ ಓ.ಜಿ. ಕುಮಾರ್, ಸುಧಾ ಪಿ.ಆರ್. ರಾಜು, ಭೋವಿ ಹನುಮಂತಪ್ಪ, ಕಡ್ಲೇಗೊಂದಿ ಕೇಶವ, ಅಕ್ಕಮ್ಮ ಬಿ.ಸುರೇಶ್, ಬಿ. ಮಂಜುನಾಥ್, ಸುನೀತಾ ಇಟಗಿ ಸುರೇಶ್, ಪಿ.ಹೆಚ್. ಮಂಜುನಾಥ್, ನಾಯಕರ ದುರುಗಪ್ಪ ಮತ್ತಿತರರು ಭಾಗವಹಿಸಿದ್ದರು.

# ಕ್ರಿಸ್‌ಮಸ್ ಸಂಭ್ರಮ

**(1ನೇ ಪುಟದಿಂದ)** ಇಮ್ಮಡಿಸಲಿದೆ. ನಗರದ ಪಿ.ಜೆ. ಬಡಾವಣೆಯಲ್ಲಿರುವ ಸಂತ ತೋಮಸರ ದೇವಾಲಯದಲ್ಲಿ ಶುಕ್ರವಾರ ರಾತ್ರಿಯೇ ಸಂಭ್ರಮ ಮೇಳೈಸಿತ್ತು. ಸಂಜೆಯಿಂದಲೇ ಜನರು ಮೇಣದ ಬತ್ತಿ ಹಚ್ಚಿ ಏಸು ಕ್ರಿಸ್ತನನ್ನು ಪ್ರಾರ್ಥಿಸುತ್ತಿದ್ದುದು ಕಂಡು ಬಂತು.

'ಜನತಾವಾಣಿ'ಯೊಂದಿಗೆ ಮಾತನಾಡಿದ ಚರ್ಚ್‌ನ ಧರ್ಮಗುರುಗಳಾದ ಫಾದರ್ ಆಂಟನಿ ಅವರು, ಕೊರೊನಾ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಳ್ಳುವಂತೆ ಚರ್ಚ್‌ನ ಮುಂಭಾಗ ನಾಮಫಲಕ ಹಾಕಲಾಗಿದೆ. ಏಸುಕ್ರಿಸ್ತ ಭೂಮಿಯಲ್ಲಿ ಜನಿಸಿದ್ದು ಮಧ್ಯರಾತ್ರಿಯಾದ ಕಾರಣ, ಚರ್ಚ್‌ನಲ್ಲಿ ಮಧ್ಯರಾತ್ರಿಯ ವೇಳೆಯೇ ಆರಾಧನೆ ನಡೆಸಲಾಗುತ್ತಿದೆ. ಏಸುಕ್ರಿಸ್ತ ಜನಿಸಿದ್ದನ್ನು ಬಿಂಬಿಸುವ ಗೋದಲಿಯನ್ನು ಚರ್ಚ್ ಆವರಣದಲ್ಲಿ ಸುಂದರವಾಗಿ ರೂಪಿಸಲಾಗಿದೆ ಎಂದು ಹೇಳಿದರು.

ಹಿಮದಿಂದ ಕೂಡಿರುವ ಮಾದರಿಯಲ್ಲಿರುವ ಗೋದಲಿಯಲ್ಲಿ ಏಸುಕ್ರಿಸ್ತರ ಜನನ, ಜೀವನ ಹಾಗೂ ಏಸುವಿನ ಸಾಕು ತಂದೆ ಜೋಸೆಫರ ಜೀವನದ ಏಳು ಘಟನಾವಳಿಗಳನ್ನೂ ಬಿಂಬಿಸಲಾಗಿದೆ. ತಿರುಗುವ ಕ್ರಿಸ್‌ಮಸ್ ಟ್ರೀ ವಿಶೇಷತೆಯಿಂದ ಕೂಡಿದೆ ಎಂದು ತಿಳಿಸಿದರು.

ಕಳೆದ ವರ್ಷ ಹೊಸ ರೂಪದ ಕೊರೊನಾ ಕಂಡು ಬಂದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ತೆಗೆದುಕೊಂಡ ರಾತ್ರಿ ಕರ್ಫ್ಯೂ ಸಹ ಕ್ರಿಸ್‌ಮಸ್ ಸಂಪ್ರದಾಯಗಳ ಮೇಲೆ ಪರಿಣಾಮ ಬೀರಿತ್ತು. ಆರಾಧನೆ, ಕೀರ್ತನೆ, ಪ್ರವಚನಗಳನ್ನು ರಾತ್ರಿ 9 ಗಂಟೆಯೊಳಗೆ ಆಚರಿಸಲಾಗಿತ್ತು. ಆದರೆ ಈ ಬಾರಿ ಸೋಂಕು ಕಡಿಮೆ ಇರುವುದರಿಂದ ಪ್ರತಿ ವರ್ಷದಂತೆಯೇ ಕ್ರಿಶ್ಚಿಯನ್ ಬಾಂಧವರ ಅತಿ ದೊಡ್ಡ ಹಬ್ಬವಾದ ಕ್ರಿಸ್‌ಮಸ್ ಸಂಭ್ರಮದಿಂದ ಕೂಡಿರಲಿದೆ.

## ರಾಣೇಬೆನ್ನೂರಿಗೆ ಇಂದು ತರಳಬಾಳು ಜಗದ್ಗುರು, ಸಿಎಂ ಬೊಮ್ಮಾಯಿ



ಕರ್ನಾಟಕದ ಇತಿಹಾಸ, ಪರಂಪರೆಯನ್ನು ಬಿಂಬಿಸುವ ನಾಡಹಬ್ಬ ಕರ್ನಾಟಕ ವೈಭವ ಕಾರ್ಯಕ್ರಮವನ್ನು ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯದಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಇಂದು ಉದ್ಘಾಟಿಸುವರು.

ದಾವಣಗೆರೆ ವಿವಿ ಕುಲಪತಿ ಎಸ್.ವಿ.ಹಲಸೆ ಅಧ್ಯಕ್ಷತೆ ವಹಿಸುವರು. ಬೆಂಗಳೂರು ತಂಡದಿಂದ ರಕ್ತಧ್ವಜ ನಾಟಕ ಪ್ರದರ್ಶನ ನಡೆಯಲಿದೆ.

ಇದಕ್ಕೂ ಮೊದಲು ಮುಖ್ಯಮಂತ್ರಿಗಳು ಸಾರ್ವಜನಿಕ ಆಸ್ಪತ್ರೆಯಲ್ಲಿ ಮೆಡಿಕಲ್ ಲಿಕ್ವಿಡ್ ಆಕ್ಸಿಜನ್ ಪ್ಲಾಂಟ್ ಹಾಗೂ ಅಭಿವೃದ್ಧಿಗೊಳಿಸಲಾದ ಹಳೆ ಪಿಬಿ ರಸ್ತೆ ಉದ್ಘಾಟನೆ ಮಾಡಿ, ಅಂತರವಳ್ಳಿ ಹಾಗೂ ವಿದ್ಯಾನಗರ ರಸ್ತೆ ಅಗಲೀಕರಣ ಕಾಮಗಾರಿಗೆ ಚಾಲನೆ ನೀಡುವರು. ಶಾಸಕ ಅರುಣಕುಮಾರ ಪೂಜಾರ ಭಾಗವಹಿಸುವರು.

## ನಗರದಲ್ಲಿ ಇಂದು ಜಂಗಮ ಸೌಹಾರ್ದ ಸಹಕಾರಿಯಿಂದ ನೇತ್ರ ತಪಾಸಣಾ ಶಿಬಿರ

ಜಂಗಮ ಸೌಹಾರ್ದ ಸಹಕಾರಿ ವತಿಯಿಂದ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರ ವರೆಗೆ ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಬ್ಯಾಂಕ್ ಸಮುದಾಯ ಭವನದಲ್ಲಿ ಜಂಗಮ ದಿನದರ್ಶಿಕೆ ಬಿಡುಗಡೆ, ಬಾಪೂಜಿ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಉಚಿತ ನೇತ್ರಾ ತಪಾಸಣೆ (ಬಿಪಿಎಲ್ ಕಾರ್ಡ್ ಹೊಂದಿದವರಿಗೆ ಉಚಿತ ನೇತ್ರ ಶಸ್ತ್ರ ಚಿಕಿತ್ಸೆ) ದೇಹದಾನ, ನೇತ್ರದಾನ ನೋಂದಣಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಹಕಾರಿಯ ಅಧ್ಯಕ್ಷ ಎನ್.ಎಂ. ಬಸವರಾಜಯ್ಯ ಅಧ್ಯಕ್ಷತೆ ವಹಿಸುವರು. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಸಿ.ಬಿ. ರಿಷ್ಯಂತ್, ಬ್ಯಾಂಕಿನ ನಿರ್ದೇಶಕ ರಮಣಲಾಲ್ ವಿ. ಸಂಘವಿ, ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಚೇರ್‌ಮನ್ ಮೃತ್ಯುಂಜಯ ಎನ್. ಹಿರೇಮಠ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

# ಅತಿಹೆಚ್ಚು ಕಬ್ಬು ಅರೆದ ಉತ್ತೂರಿನ ಐಸಿಪಿಎಲ್ ಕಂಪನಿ

**(1ನೇ ಪುಟದಿಂದ)** ಶಾಮನೂರು ಶಿವಶಂಕರಪ್ಪ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ನೇಗಿಲು ನೀಡಿ ಹಸಿರು ಶಾಲು ಹೊದಿಸಿ ಸನ್ಮಾನಿಸಿದರು.

ಇದೇ ವೇಳೆ ಪ್ರಗತಿಪರ ರೈತರಾದ ಗೋವಿಂದಪ್ಪ ಗುಜ್ಜನವರ್ ಅವರು 1 ಎಕರೆಯಲ್ಲಿ 105 ಟನ್ ಕಬ್ಬು ಬೆಳೆದಿರುವುದನ್ನು ಶಾಮನೂರು ಶಿವಶಂಕರಪ್ಪ ಹಾಗೂ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಬಳಿ ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರುಗಳಾದ ಸಚಿನ್ ಪಾಟೀಲ್, ವೆಂಕಣ್ಣ ಪೂಜಾರ್, ಮುಧೋಳ್‌ನ ಬಂಡು ಘಾಟ್ಗೆ, ಎಸ್.ಎಂ.ಸಮರ್ಥ್, ಕಂಪನಿಯ ಪ್ರಧಾನ ವ್ಯವಸ್ಥಾಪಕ ಪ್ರಕಾಶ್, ಸರವನ್, ಜೋಷಿ, ಮಾರುತಿ, ಉದ್ಯಮಿ ಎಸ್.ಕೆ.ವೀರಣ್ಣ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಜಿಲ್ಲಾ ಪಂಚಾಯಿತಿ ಸದಸ್ಯ ಜಿ.ಸಿ.ನಿಂಗಪ್ಪ, ಅನ್ವರ್ ತುರ್ಚಘಟ್ಟ, ರಾಘವೇಂದ್ರ ಶಿರಮಗೊಂಡನಹಳ್ಳಿ ಮತ್ತಿತರರಿದ್ದರು.


# ಕಮೀಷನ್ ಪಡೆಯದಂತೆ ಸೂಚನೆ

**(1ನೇ ಪುಟದಿಂದ)** ವೆಂಕಟರಮಣಯ್ಯ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಎಪಿಎಂಸಿಗಳಲ್ಲಿ ರೈತರಿಂದ ಮಧ್ಯವರ್ತಿಗಳು ಕಮಿಷನ್ ಪಡೆಯದಂತೆ ಸೂಚನೆ ನೀಡಲಾಗಿದೆ. ಹಾಗೊಂದು ವೇಳೆ ಯಾವುದೇ ಭಾಗದಲ್ಲಿ ಕಮೀಷನ್ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದರೆ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಕೆ ಕೊಟ್ಟರು. ದೊಡ್ಡಬಳ್ಳಾಪುರ ಎಪಿಎಂಸಿಯಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಲು ಸರ್ಕಾರ ಬದ್ಧವಿದೆ. ಸಾಧ್ಯವಾದರೆ ನಾನೇ ಅಲ್ಲಿಗೆ ಭೇಟಿ ಕೊಟ್ಟು ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಎಸ್.ವಿ. ಸಂಕನೂರ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಕೃಷಿ ಸಚಿವ ಬಿ.ಸಿ. ಪಾಟೀಲ್, ಕೃಷಿ ವಿದ್ಯಾಲಯಗಳಲ್ಲಿ ಖಾಲಿ ಇರುವ ಎಐಸಿಆರ್‌ಪಿ ಹುದ್ದೆಗಳನ್ನು ಭರ್ತಿ ಮಾಡಲು ಪರಿಶೀಲನೆ ನಡೆಸಲಾಗುತ್ತಿದೆ ಎಂದರು.

ಎಐಆರ್‌ಪಿಯಿಂದ ಶೇ. 100 ರಷ್ಟು ಅನುದಾನಿತ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಖಾಲಿ ಇರುವ 49 ಬೋಧಕರ ಹಾಗೂ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡುವಂತೆ ಸಂಬಂಧಪಟ್ಟ ವಿವಿಯ ಉಪಕುಲಪತಿಗಳಿಗೆ ಸೂಚಿಸಲಾಗಿದೆ ಎಂದರು.


## 13ನೇ ಪುಣ್ಯಸ್ಮರಣೆ




ಶ್ರೀಮತಿ ಮಟ್ಟಿಕಲ್ ಹನುಮಮ್ಮ
ಬಿ. ರುದ್ರಪ್ಪ


*ನೀವು ನಮ್ಮನ್ನಗಲಿ ಇಂದಿಗೆ 13 ವರ್ಷಗಳು ಕಳೆದಿವೆ. ಸದಾ ತಮ್ಮ ನೆನಪಿನಲ್ಲಿ ಹಾಗೂ ತಾವು ಹಾಕಿಕೊಟ್ಟ ಹಾದಿಯಲ್ಲೇ ನಡೆಯುತ್ತಿರುವ,*

ಮಕ್ಕಳು : **ಪ್ರದೀಪ್ ಕುಮಾರ್, ರಮೇಶ್, ಶಿವಮ್ಮ (ಶೋಭ),**
ಅಳಿಯಂದಿರಾದ : **ಎಂ. ವೆಂಕೋಬಪ್ಪ**
ಮೊಮ್ಮಕ್ಕಳಾದ : **ರಶ್ಮಿ, ಅಭಿಷೇಕ್, ಪೂಜಾ ಸುಹಾಸ್, ಸುಮಂತ, ಸುಬ್ರಹ್ಮಣ್ಯ, ತಿಪ್ಪೇಸ್ವಾಮಿ,**
14ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ.

## 25ನೇ ವರ್ಷದ ಚಿರಸ್ಮರಣೆ



ದಿ. ಶ್ರೀ ವರವಿನ ಭೀಮಪ್ಪ
25.12.1996



ದಿ. ಶ್ರೀಮತಿ ವರವಿನ ಕೆಂಚಮ್ಮ
19.04.2002

*ನೀವು ನಮ್ಮಿಂದ ದೂರವಾಗಿ 25 ವರ್ಷಗಳು, ನಿಮ್ಮಗಳ ನೆನಪು ಹಚ್ಚ ಹಸಿರಿನಂತಿದೆ. ನಿಮ್ಮ ಪ್ರೀತಿ, ಮಮತೆ, ವಾತ್ಸಲ್ಯಮಯ ಜೀವನವೇ ನಮ್ಮೆಲ್ಲರ ಬದುಕಿಗೆ ಶಕ್ತಿ ಚೈತನ್ಯ. ನಿಮ್ಮಗಳ ಸವಿನೆನಪು ಮರೆಯಲಾರೆವು ನಿಮ್ಮಗಳ ಆಶೀರ್ವಾದವೇ ನಮಗೆ ದಾರಿದೀಪ ನಿಮ್ಮ ಆತ್ಮಕ್ಕೆ ಆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ....*

***ನಿಮ್ಮ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಬಂಧುಗಳು ಹಾಗೂ ವರವಿನ ವಂಶಸ್ಥರು, ಮತ್ತಿ, ದಾವಣಗೆರೆ ತಾಲ್ಲೂಕು.***


# ಮಲೇಬೆನ್ನೂರು ಪುರಸಭೆಯಲ್ಲಿ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ

## ಹರಿಹರದ ಶಾಸಕ ಎಸ್. ರಾಮಪ್ಪ ವಿಶ್ವಾಸ



ಮಲೇಬೆನ್ನೂರು, ಡಿ.24- ಮಲೇಬೆನ್ನೂರು ಪುರಸಭೆ ಚುನಾವಣೆಯಲ್ಲಿ ಈ ಬಾರಿ ಕಾಂಗ್ರೆಸ್ ಪಕ್ಷ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ ಎಂದು ಶಾಸಕ ಎಸ್. ರಾಮಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ 1, 2, 3, 4, 5, 14, 20, 21 ಮತ್ತು 22 ನೇ ವಾರ್ಡಿನಲ್ಲಿ ಇಂದು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪರ ಮತ ಯಾಚನೆ ಮಾಡಿ ಅವರು ಮಾತನಾಡಿದರು.

ಈ ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗಲೇ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರು ನಮ್ಮ ಮನವಿ ಮೇರೆಗೆ ಮಲೇಬೆನ್ನೂರು ಗ್ರಾ.ಪಂ. ಅನ್ನು ಪುರಸಭೆಯಾಗಿ ಮೇಲ್ದರ್ಜೆಗೆ ಏರಿಸಿದ್ದರು.

ಪುರಸಭೆಯ ಪ್ರಥಮ ಚುನಾವಣೆಯಲ್ಲಿ ಕಾಂಗ್ರೆಸ್ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ ಜೆಡಿಎಸ್ ಬಿಜೆಪಿ ಜೊತೆ ಸೇರಿ ಅಧಿಕಾರ ನಡೆಸಿತು.

ನಗರೋತ್ಥಾನ ಯೋಜನೆಯಡಿ ಮಲೇಬೆನ್ನೂರಿಗೆ ಶೀಘ್ರ 15 ಕೋಟಿ ರೂ. ಅನುದಾನ ಬಿಡುಗಡೆಯಾಗಲಿದೆ. ಮುಂದಿನ ವರ್ಷ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಸ್ಪಷ್ಟವಾಗಿದ್ದು, ಮಲೇಬೆನ್ನೂರು ಪುರಸಭೆಯಲ್ಲೂ ಕಾಂಗ್ರೆಸ್‌ಗೆ ಅಧಿಕಾರ ನೀಡಲು ಜನ ತೀರ್ಮಾನಿಸಿದ್ದಾರೆ ಎಂದು ರಾಮಪ್ಪ ಹೇಳಿದರು.

ವಿಧಾನ ಪರಿಷತ್ ಮಾಜಿ ಸದಸ್ಯರುಗಳಾದ ಅಬ್ದುಲ್ ಜಬ್ಬಾರ್, ಶ್ರೀಮತಿ ಜಲಜಾನಾಯ್ಕ ಮಾತನಾಡಿದರು.

ಜಿ.ಪಂ. ಮಾಜಿ ಸದಸ್ಯರಾದ ಬೆಣ್ಣೆಹಳ್ಳಿ ಹಾಲೇಶಪ್ಪ, ಎಂ. ನಾಗೇಂದ್ರಪ್ಪ, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಮುಖಂಡರಾದ ಸೈಯದ್ ರೋಷನ್, ಡಾ. ಬಿ. ಚಂದ್ರಶೇಖರ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ನಗರಸಭೆ ಮಾಜಿ ಅಧ್ಯಕ್ಷ ರೇವಣಸಿದ್ದಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಸೈಯದ್ ಜಾಕೀರ್, ಹೆಚ್.ಜಿ. ಚಂದ್ರಶೇಖರ್, ನಂದಿಗಾವಿ ಶ್ರೀನಿವಾಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ರಾಜ್ಯ ಯುವ ಕಾಂಗ್ರೆಸ್ ಕಾರ್ಯದರ್ಶಿ ಖಾಲಿದ್, ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹೊನ್ನಾಳಿ ರಂಜಿತ್, ಹರಿಹರ ಯುವ ಕಾಂಗ್ರೆಸ್ ಉಪಾಧ್ಯಕ್ಷ ತಾಹೀರ್, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ಪುರಸಭೆ ಮಾಜಿ ಸದಸ್ಯರಾದ ಎ. ಆರೀಫ್ ಅಲಿ, ಎಂ.ಬಿ. ಫೈಜು, ಫಕ್ರುದ್ದೀನ್, ಪಿಎಸಿಎಸ್ ಅಧ್ಯಕ್ಷ ಪಿ.ಆರ್. ಕುಮಾರ್, ಯೂನೂಸ್, ಪಿ.ಹೆಚ್. ಶಿವಕುಮಾರ್ ಎಳೆಹೊಳೆ ಕುಮಾರ್, ವಿದ್ಯಾ, ನೇತ್ರಾವತಿ, ಸವಿತಾ ನಾಯ್ಕ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಪಂಚಮಸಾಲಿ ಸಮುದಾಯದ 2ಎ ಬಗ್ಗೆ ಸಮೀಕ್ಷೆ: ಶೀಘ್ರವೇ ಸರ್ಕಾರಕ್ಕೆ ವರದಿ



ದಾವಣಗೆರೆ, ಡಿ.24- ಪಂಚಮಸಾಲಿ ಸಮುದಾಯದವರು 3ಬಿ ಯಿಂದ ಹಿಂದುಳಿದ ವರ್ಗಗಳ 2ಎಗೆ ಸೇರಿಸಿ ಮೀಸಲಾತಿ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿರುವ ಸಂಬಂಧ ಆ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ ನಡೆಸಿ, ಸರ್ಕಾರಕ್ಕೆ ಆದಷ್ಟು ಬೇಗ ವರದಿ ಸಲ್ಲಿಸಲಾಗುವುದು ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ತಿಳಿಸಿದರು.

ನಗರದ ಸರ್ಕ್ಯೂಟ್ ಹೌಸ್‌ನಲ್ಲಿ ನಿನ್ನೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಂಚಮಸಾಲಿ ಸಮಾಜದವರು 3ಬಿ ಯಿಂದ 2ಎಗೆ ಸೇರಿಸಬೇಕೆಂಬ ಬೇಡಿಕೆ ಸಲ್ಲಿಸಿದ್ದಾರೆ. ಈ ಬಗ್ಗೆ ಪರ-ವಿರೋಧ ಚರ್ಚೆಗಳು ನಡೆಯುತ್ತಿವೆ. ಆಯೋಗದಿಂದ ರಾಜ್ಯದಲ್ಲಿ ಪಂಚಮಸಾಲಿ ಸಮುದಾಯ ನೆಲೆಸಿರುವ ಗ್ರಾಮಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸುವ ಕಾರ್ಯ ದಾವಣಗೆರೆ ಜಿಲ್ಲೆಯಿಂದ ಇಂದಿನಿಂದ ಆರಂಭಿಸಲಾಗಿದ್ದು, ಮೂರು ದಿನಗಳ ಕಾಲ ಜಿಲ್ಲೆಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸಲಾಗುವುದು ಎಂದು ಹೇಳಿದರು.

ಈಗಾಗಲೇ ಪಂಚಮಸಾಲಿ ಸಮಾಜ ಹಿಂದುಳಿದ ವರ್ಗಗಳ 3ಬಿ ಪಟ್ಟಿಯಲ್ಲಿದ್ದು, 2ಎ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಕೆಲವು ಸಮಾಜಗಳು ಪಂಚಮಸಾಲಿ ಸಮಾಜವನ್ನು 2ಎ ಪಟ್ಟಿಗೆ ಸೇರಿಸಬಾರದಾಗಿ ಮನವಿ ನೀಡಿದ್ದಾರೆ. ಹಾಗಾಗಿ ಪಂಚಮಸಾಲಿ ಸಮಾಜ ವಾಸಿಸುವ ಪ್ರದೇಶ, ಕುಲ ಕಸುಬು ಮತ್ತು ಅವರುಗಳ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಬಗ್ಗೆ ವಸ್ತುನಿಷ್ಠ ಸಮೀಕ್ಷೆ ನಡೆಸಿ, ಯಾವ ಸಮುದಾಯದವರಿಗೂ ಅನ್ಯಾಯವಾಗದಂತೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದರು.

ರಾಜ್ಯ ಸರ್ಕಾರ ಆಯೋಗಕ್ಕೆ ವರದಿ ಸಲ್ಲಿಸಲು ಯಾವುದೇ ಕಾಲ ಮಿತಿ ನಿಗದಿಪಡಿಸಿಲ್ಲ. ಆದರೆ, ನಮಗೆ ಎರಡು ವರ್ಷ ಅವಧಿಯಿದ್ದು, ಅಷ್ಟರೊಳಗೆ ಪಂಚಮಸಾಲಿ ಸಮಾಜದವರು ನೆಲೆಸಿರುವ ರಾಜ್ಯದ 9ರಿಂದ 10 ಜಿಲ್ಲೆಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸಿ, ಸಮಗ್ರ ವರದಿ ತಯಾರಿಸಿ ಆದಷ್ಟು ಬೇಗ ಸರ್ಕಾರಕ್ಕೆ ಸಲ್ಲಿಸುತ್ತೇವೆ ಎಂದರು.

**ತೆಲಂಗಾಣದ ಮಾದರಿಯಂತೆ ಅನಾಥ ಮಕ್ಕಳಿಗೂ ಸೌಲಭ್ಯ:** ಅನಾಥಾಶ್ರಮಗಳಲ್ಲಿರುವ ಮಕ್ಕಳನ್ನು ಭೇಟಿ ಮಾಡಿ, ಆ ಮಕ್ಕಳ ಮುಂದಿನ ಶೈಕ್ಷಣಿಕ ಹಾಗೂ ಉದ್ಯೋಗದ ಹಿತದೃಷ್ಟಿಯಿಂದ ಯಾವ ಜಾತಿಗೆ ಸೇರಿದ್ದಾರೆಂಬ ಬಗ್ಗೆ ಸಮೀಕ್ಷೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು. ಅಲ್ಲದೇ ಆ ಮಕ್ಕಳನ್ನು ಆ ಸಮುದಾಯದ ವ್ಯಾಪ್ತಿಗೆ ತರಲು ಪ್ರಯತ್ನಿಸಲಾಗುವುದು. ಈ ವಿಷಯಕ್ಕೆ ಸಂಬಂಧಿಸಿದಂತೆ ತೆಲಂಗಾಣದ ಹಲವು ಅನಾಥಾಶ್ರಮಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಲಾಗಿದೆ. ಅಲ್ಲಿ ಅನುಸರಿಸುತ್ತಿರುವ ಮಾದರಿಯಂತೆ ಇಲ್ಲಿನ ಮಕ್ಕಳಿಗೂ ಸೌಲಭ್ಯ ಒದಗಿಸಲು ಶ್ರಮಿಸಲಾಗುವುದೆಂದರು.

ಈ ಸಂದರ್ಭದಲ್ಲಿ ಆಯೋಗದ ಸದಸ್ಯರುಗಳಾದ ಕಲ್ಯಾಣ್ ಕುಮಾರ್, ಟಿ.ಪಿ. ಸುವರ್ಣ, ರಾಜಶೇಖರ್, ಅರುಣ್ ಕುಮಾರ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಗಂಗಪ್ಪ ಸೇರಿದಂತೆ, ಇತರರು ಇದ್ದರು.

**ಪಂಚಮಸಾಲಿ ಸಮಾಜ ವಾಸದ ಪ್ರದೇಶಗಳಿಗೆ ಭೇಟಿ:** ಆಯೋಗವು ಜಿಲ್ಲೆಯ ಪಂಚಮಸಾಲಿ ಸಮಾಜದವರು ವಾಸಿಸುವ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ, ಕುಲ ಕಸುಬು ಮತ್ತು ಅವರುಗಳ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಅಧ್ಯಯನ ನಡೆಸಿತು.

# ದೈಹಿಕ - ಬೌದ್ಧಿಕ ಸದೃಢತೆಯ ಯುವ ಜನಾಂಗ ಅವಶ್ಯ



**ದಾವಣಗೆರೆ ವಿವಿ ಅಂತರ ಕಾಲೇಜು ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿ ಉದ್ಘಾಟನೆಯಲ್ಲಿ ಡಾ. ಎಂ.ಜಿ. ಈಶ್ವರಪ್ಪ ಆಶಯ**

ದಾವಣಗೆರೆ, ಡಿ.24- ಸದೃಢ ರಾಷ್ಟ್ರ ನಿರ್ಮಾಣಕ್ಕೆ ದೈಹಿಕ - ಬೌದ್ಧಿಕ ಸದೃಢತೆಯುಳ್ಳ ಯುವ ಜನಾಂಗ ಬೇಕಾಗಿದೆ. ಆ ಸದೃಢತೆಯನ್ನು ಕ್ರೀಡಾ ಚಟುವಟಿಕೆಗಳ ಮುಖೇನ ಪಡೆಯಬಹುದು ಎಂದು ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ತಿಳಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಧರಾಮ ವಿಜ್ಞಾನ ಕಾಲೇಜು, ದಾವಣಗೆರೆ ವಿಶ್ವವಿದ್ಯಾನಿಲಯಗಳ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ ದಾವಣಗೆರೆ ವಿವಿ ಅಂತರ ಕಾಲೇಜು ಪುರುಷ ಮತ್ತು ಮಹಿಳೆಯರ ಬ್ಯಾಸ್ಕೆಟ್ ಬಾಲ್ ಪಂದ್ಯ ಹಾಗೂ ಆಯ್ಕೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನಸ್ಸಿನಂತೆ ದೇಹವೂ ಸದೃಢವಾಗಿರಲು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಅಲ್ಲದೇ ಅದು ನಿಮ್ಮ ಭವಿಷ್ಯದ ಸರ್ವಾಂಗೀಣ ಪ್ರಗತಿಗೆ ಪೂರಕವಾಗಲಿದೆ. ಶಿಕ್ಷಣದ ಜೊತೆಗೆ ಕ್ರೀಡೆಯಲ್ಲೂ ಸಹ ಉತ್ತಮವಾಗಿದ್ದರೆ ಕಾಲೇಜು ಸಾರ್ಥಕತೆ ಪಡೆಯಲಿದೆ ಎಂದು ಹೇಳಿದರು.

ದಾವಣಗೆರೆ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಕೆ. ವೆಂಕಟೇಶ್ ಮಾತನಾಡಿ, ಕ್ರೀಡಾಪಟುಗಳಿಗೆ ಪ್ರತಿ ಹಂತದಲ್ಲೂ ಸಾಕಷ್ಟು ಗೌರವವಿದೆ. ತಾಳ್ಮೆ (ಟಾಲರೆನ್ಸ್), ಕೌಶಲ್ಯ (ಸ್ಕಿಲ್) ಇವುಗಳನ್ನೊಳಗೊಂಡಿರುವುದೇ ಕ್ರೀಡೆ. ಈ ಅಂಶಗಳನ್ನು ಕೇವಲ ಕ್ರೀಡೆಗಷ್ಟೇ ಅಲ್ಲದೇ, ನಿಮ್ಮ ಜೀವನದಲ್ಲೂ ಅಳವಡಿಸಿಕೊಂಡರೆ ಯಶಸ್ಸು ಕಾಣಬಹುದು ಎಂದು ಸ್ಪೋರ್ಟ್ಸ್ ಎಂಬುದರ ಪ್ರತಿ ಅಕ್ಷರದ ಒಳಾರ್ಥವನ್ನು ಕ್ರೀಡಾಪಟುಗಳಿಗೆ ಮನವರಿಕೆ ಮಾಡಿದರು.

ಧರಾಮ ಕಾಲೇಜಿನ ಪ್ರಾಂಶುಪಾಲರಾದ ಡಾ. ಆರ್. ವನಜಾ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಸ್ತುತ ಮಕ್ಕಳಿಗೆ ಹೊರಾಂಗಣ ಕ್ರೀಡೆಗಳ ಬದಲಿಗೆ ಮೊಬೈಲ್, ಕಂಪ್ಯೂಟರ್‌ಗಳಲ್ಲಿನ ಆಟವೇ ಹೆಚ್ಚಾಗಿದೆ. ಹೀಗಾದರೆ ದೈಹಿಕ ಮತ್ತು ಮಾನಸಿಕ ಸದೃಢತೆ ಕಾಣಲು ಹೇಗೆ ಸಾಧ್ಯ. ಮಕ್ಕಳು ಕ್ರೀಡೆಯಲ್ಲಿ ಪಾಲ್ಗೊಂಡರೆ ಶೈಕ್ಷಣಿಕವಾಗಿ ಅಂಕ ಗಳಿಸಲು ಸಾಧ್ಯವಿಲ್ಲ ಎಂಬ ತಪ್ಪು ತಿಳುವಳಿಕೆ ಪೋಷಕರಲ್ಲಿದೆ. ಮಕ್ಕಳ ಸರ್ವಾಂಗೀಣ ಪ್ರಗತಿಗೆ ಕ್ರೀಡೆ ಅತ್ಯಗತ್ಯ ಎಂದರು.

ಧರಾಮ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಆರ್. ಗೋಪಾಲಕೃಷ್ಣ ನಾಯ್ಕ್ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ತನ್ಮಯಿ ಪ್ರಾರ್ಥಿಸಿದರು. ದೈಹಿಕ ಶಿಕ್ಷಣ ಉಪನ್ಯಾಸಕ ಎಸ್.ಆರ್. ಕುಮಾರ್ ಸ್ವಾಗತಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಶಿವಪ್ಪ ಮಳ್ಳೂರ್ ನಿರೂಪಿಸಿದರು. ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಟಿ. ವಸಂತನಾಯ್ಕ್ ವಂದಿಸಿದರು.

# ಹರ ಮಾಲೆ ವ್ರತದ ವಿನೂತನ ಕಾರ್ಯಕ್ರಮಕ್ಕೆ ಶ್ರೀಗಳ ಪ್ರವಾಸ




ಹರಪನಹಳ್ಳಿ, ಡಿ.24- ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಹರಿಹರ ಪೀಠದಲ್ಲಿ ನಡೆಯುವ ಹರ ಜಾತ್ರೆಯಲ್ಲಿ ಈ ಬಾರಿ ಹೊಸದಾಗಿ ಹರಮಾಲೆ ವ್ರತ ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪಂಚಮಸಾಲಿ ಸಮಾಜದ ವಿಜಯನಗರ ಜಿಲ್ಲಾ ಘಟಕದ ಅಧ್ಯಕ್ಷ ಪ್ರಕಾಶ್ ಪಾಟೀಲ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂಚಮಸಾಲಿ ಪೀಠದ ದೂರದೃಷ್ಟಿ ಸಂಕಲ್ಪ ಸಾಮಾಜಿಕ ಬದಲಾವಣೆಯಲ್ಲಿ ಹರ ಮಾಲೆ ದೊಡ್ಡ ಪಾತ್ರ ವಹಿಸುತ್ತದೆ. ನಡತೆ ತಪ್ಪಿದವರನ್ನು ತಿದ್ದುವ, ದುಶ್ಚಟಗಳಿಗೆ ದಾಸರಾದವರನ್ನು ಅದರಿಂದ ಮುಕ್ತಿಗೊಳಿಸುವ, ಧೂಮಪಾನ, ಮದ್ಯಪಾನದಂತಹ ಸಾಮಾಜಿಕ ಪಿಡುಗುಗಳಿಗೆ ತಿಲಾಂಜಲಿ ಇಡುವ, ಎಲ್ಲಕ್ಕಿಂತ ಹೆಚ್ಚಾಗಿ ಸಮಾಜವನ್ನು ಒಳ್ಳೆಯ ಮನಸ್ಸುಗಳಿಂದ ನಿರ್ಮಿಸುವ ಆತ್ಮ ಶುದ್ಧೀಕರಿಸುವ ಮಹಾಸಂಕಲ್ಪ ಹರ ಜಾತ್ರೆ, ಹರ ಮಾಲೆಯ ಹಿಂದಿದೆ ಎಂದು ಹೇಳಿದರು.

ಯುವ ಮನಸ್ಸುಗಳು 21, 15, 9, 5 ಹಾಗೂ 3 ದಿನಗಳ ಕಾಲ ಅತ್ಯಂತ ಕಟ್ಟುನಿಟ್ಟಾಗಿ ಹರಮಾಲೆ ವ್ರತವನ್ನು ಕೈಗೊಳ್ಳಬೇಕು.

ಪಂಚಮಸಾಲಿ ಸಮಾಜದ ತಾಲ್ಲೂಕು ಘಟಕದ ಅಧ್ಯಕ್ಷ ಪಟೇಲ್ ಬೆಟ್ಟನಗೌಡ ಮಾತನಾಡಿ ಹರ ಜಾತ್ರೆ, ಉದ್ಯಮಿಯು ಉದ್ಯೋಗ ನೀಡುವ ಸಮಾವೇಶ, ರಾಷ್ಟ್ರೀಯ ಶಿಕ್ಷಣ ಕೌಶಲ್ಯ, ಕೃಷಿ ಸಮಾವೇಶ, ತಮ್ಮ ಚತುರ್ಥ ಪೀಠಾರೋಹಣ ಕಾರ್ಯಕ್ರಮದ ನಿಮಿತ್ಯ ಪಂಚಮಸಾಲಿ ಹರಿಹರ ಪೀಠದ ಶ್ರೀ ವಚನಾನಂದ ಸ್ವಾಮೀಜಿಯವರು ಜ.1 ರಿಂದ 3 ರವರೆಗೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಆಯ್ದ ಗ್ರಾಮಗಳ ಗ್ರಾಮ ದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳುವರು ಎಂದು ಅವರು ಹೇಳಿದರು.

ಆದ್ದರಿಂದ ಹರ ಮಾಲೆ ವ್ರತ ಕೈಗೊಳ್ಳುವ ತಾಲ್ಲೂಕಿನ ಯುವ ಜನರು ಪಟೇಲ್ ಬೆಟ್ಟನ ಗೌಡ -9538215615, ಡಿ.ಚೆನ್ನನಗೌಡ -9741267744, ಜಿ.ಕೆ.ಮಲ್ಲಿಕಾರ್ಜುನ -9901647448, ಮಹೇಶ್ ಪೂಜಾರ್ -7019298538, ಎಸ್. ಸುರೇಶ್ -9741253034, ಶ್ರೀಮತಿ -90085 35232 ಸಂಪರ್ಕಿಸಲು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ, ಎ.ಎಚ್.ಪಂಪಣ್ಣ, ಶಶಿಧರ ಪೂಜಾರ್, ಬೇಲೂರು ಅಂಜಪ್ಪ, ಜೆ. ಓಂಕಾರಗೌಡ, ಮಂಜುನಾಥ್ ಪೂಜಾರ್, ಎಸ್. ಸುರೇಶ, ಅಂಗಡಿ ಚಂದ್ರಪ್ಪ, ಬಣಕಾರ ದೊಡ್ಡ ಮಲ್ಲಿಕಾರ್ಜುನ್. ಎ.ಜಿ. ಮಂಜುನಾಥ್, ಡಿ. ಚೆನ್ನನಗೌಡ, ಕ್ಯಾರಕಟ್ಟಿ ಚೆನ್ನ ಬಸವನಗೌಡ, ಅಡವಿಹಳ್ಳಿ ಮಂಜುನಾಥ್, ಬಣಕಾರ ಮಲ್ಲಿಕಾರ್ಜುನ, ನೀಲಗುಂದ ಕೊಟ್ರೇಶ್, ಜಗದೀಶ್ ಬಾಗಳಿ ಹಾಗೂ ಮತ್ತಿತರರಿದ್ದರು.

# ಎಂಇಎಸ್, ಶಿವಸೇನೆ ನಿಷೇಧಕ್ಕೆ ಒತ್ತಾಯ: ಕರವೇ ಪ್ರತಿಭಟನೆ

ದಾವಣಗೆರೆ, ಡಿ.24- ಕನ್ನಡ ಬಾವುಟ ಸುಟ್ಟಿದ್ದಲ್ಲದೇ, ಬೆಳಗಾವಿಯಲ್ಲಿ ಸಂಗೊಳ್ಳಿ ರಾಯಣ್ಣರ ಮೂರ್ತಿ ವಿರೂಪಗೊಳಿಸಿರುವ ಎಂಇಎಸ್ ಮತ್ತು ಶಿವಸೇನೆಯನ್ನು ನಿಷೇಧಿಸಬೇಕೆಂದು ಒತ್ತಾಯಿಸಿ, ನಗರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್‌ಶೆಟ್ಟಿ ಬಣದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಜಯದೇವ ವೃತ್ತದಲ್ಲಿ ಜಮಾಯಿಸಿದ ಕರವೇ ಕಾರ್ಯಕರ್ತರು, ಎಂಇಎಸ್ ಮತ್ತು ಶಿವಸೇನೆಯ ಪುಂಡಾಟಿಕೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಎಂಇಎಸ್ ಅಧ್ಯಕ್ಷರ ಭಾವಚಿತ್ರಕ್ಕೆ ಚಪ್ಪಲಿ ಸೇವೆ ಮಾಡಿ, ಬಳಿಕ ನಗರದ ಸಂಗೊಳ್ಳಿ ರಾಯಣ್ಣ ವೃತ್ತದ ವರೆಗೆ ಬೈಕ್ ರ್ಯಾಲಿ ನಡೆಸಿದರು.

ಸರ್ಕಾರ ಪ್ರತಿ ಬಾರಿ ಬೆಳಗಾವಿಯಲ್ಲಿ ಅಧಿವೇಶನ ನಡೆಸುವ ವೇಳೆಯಲ್ಲಿ ಎಂಇಎಸ್ ಒಂದಿಲ್ಲೊಂದು ರೀತಿಯಲ್ಲಿ ಅಡ್ಡಿ ಮಾಡುತ್ತಲೇ ಬಂದಿದೆ. ಅದೇ ರೀತಿ ಈ ಬಾರಿಯೂ ಅಧಿವೇಶನದ ವೇಳೆಯಲ್ಲಿ ಎಂಇಎಸ್ ಪುಂಡರು ಮರಾಠಿ ಮೇಳ ನಡೆಸಲು ಮುಂದಾಗಿದ್ದರು. ಹೀಗಾಗಿ, ನಮ್ಮ ನಾಡಿನ ಕನ್ನಡಪರ ಹೋರಾಟಗಾರ ಸಂಪತ್‌ಕುಮಾರ್ ಮತ್ತು ಸಂಗಡಿಗರು ಎಂಇಎಸ್ ಮುಖಂಡರ ಮುಖಕ್ಕೆ ಮಸಿ ಬಳಿದು, ತಕ್ಕ ಶಾಸ್ತಿ ಮಾಡಿದ್ದಾರೆ. ಆದರೆ, ಪೊಲೀಸರು ಸಂಪತ್‌ಕುಮಾರ್ ವಿರುದ್ಧ ಕೊಲೆಯತ್ನ ಪ್ರಕರಣ ದಾಖಲಿಸಿರುವುದು ಅತ್ಯಂತ ಖಂಡನೀಯವಾಗಿದೆ ಎಂದು ಜಿಲ್ಲಾಧ್ಯಕ್ಷ ಜಮ್ಮನಹಳ್ಳಿ ನಾಗರಾಜ್ ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಕರವೇಯ ರವಿ ನಾಯ್ಕ, ಆದಾಪುರ ನಾಗರಾಜ್, ಜಿ.ಎಚ್.ನಾಗರಾಜ್, ಜಮಾಲ್, ಕಲೀಂ, ಎ.ಲಿಂಗರಾಜ್, ದಯಾನಂದ, ಸಂದೀಪ್, ದೇವೇಂದ್ರಪ್ಪ, ರೇವಣಸಿದ್ದಪ್ಪ, ಮೊಹಿದ್ದೀನ್, ಏಜಾಜ್, ಇರ್ಫಾನ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಸಂಗೊಳ್ಳಿ ರಾಯಣ್ಣ, ಛತ್ರಪತಿ ಶಿವಾಜಿ ಸಾಮರಸ್ಯದ ಭಾವಚಿತ್ರ ಬಿಡಿಸಿ ಪ್ರತಿಭಟಿಸಿದ ಕಲಾವಿದ




ಹರಿಹರ, ಡಿ.24- ಹರಿದು ಹಂಚಿ ಹೋಗಿದ್ದ ನಮ್ಮ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ವರಲ್ಲಿ ಎಲ್ಲ ಭಾಷಿಕರೂ ಇದ್ದಾರೆ. ಆದರೆ ಕೆಲ ಪುಂಡ- ಪೋಕರಿಗಳು, ರಾಜಕಾರಣಿಗಳ ಮಾತು ಕೇಳಿ ಸ್ನೇಹ- ಸೌಹಾರ್ದತೆ ಕದಡುವುದರಲ್ಲಿ ತೊಡಗಿರುವುದು ಬೇಸರದ ಸಂಗತಿ ಎಂದು ಕರ್ನಾಟಕ ಸಮರ ಸೇನೆಯ ರಾಜ್ಯ ಕಾರ್ಯಾಧ್ಯಕ್ಷ ಡಾ॥ ಬಿ. ವಾಸುದೇವ ವಿಷಾದಿಸಿದರು.

ಗುರು ದ್ರೋಣಾಚಾರ್ಯ ಸಮ್ಮಾನ ಚಿತ್ರಕಲಾವಿದ ಡಾ॥ ಮೆಹೆಂದಳೆ ಚಿತ್ರಿಸಿದ ಸಂಗೊಳ್ಳಿ ರಾಯಣ್ಣ ಹಾಗೂ ಛತ್ರಪತಿ ಶಿವಾಜಿಯ ಸಾಮರಸ್ಯದ ಭಾವ ಚಿತ್ರವನ್ನು ಕರ್ನಾಟಕ ಸಮರಸೇನೆ ಕಛೇರಿಯಲ್ಲಿ ಬಿಡುಗಡೆಗೊಳಿಸಿ ಮಾತನಾಡಿದರು.

ಕರ್ನಾಟಕದ ಸಂಗೊಳ್ಳಿ ರಾಯಣ್ಣ ಹಾಗೂ ಮಹಾರಾಷ್ಟ್ರದ ಛತ್ರಪತಿ ಶಿವಾಜಿ ದೇಶಕ್ಕಾಗಿ ಬ್ರಿಟಿಷರ ವಿರುದ್ದ ಹೋರಾಡಿದವರು. ಅವರಲ್ಲಿನ ಸಾಮರಸ್ಯ ಪ್ರಜೆಗಳಿಗೆ ಒಂದು ಮಾದರಿಯಾಗಬೇಕೇ ಹೊರತು, ರಾಜ್ಯ ರಾಜ್ಯಗಳಲ್ಲಿ ಗಡಿ, ನೆಲ ಭಾಷೆ ಅಂತ ವಿಷ ಬೀಜ ಬಿತ್ತಬಾರದು. ಅಂತಹ ವಿಷ ಬೀಜ ಬಿತ್ತುವ ಯಾರೇ ಆಗಲಿ ಅವರನ್ನು ಸರ್ಕಾರ ಪಕ್ಷಭೇದ ಮರೆತು ಉಗ್ರ ಶಿಕ್ಷೆ ನೀಡಿದಲ್ಲಿ ಮಾತ್ರ ಕಿಡಿಗೇಡಿಗಳ ಉಪಟಳ ಕಡಿಮೆಯಾಗಲು ಸಾಧ್ಯ ಎಂದು ನುಡಿದರು.

ರಾಜ್ಯ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ ಸಂಗೊಳ್ಳಿ ರಾಯಣ್ಣ ಮತ್ತು ಶಿವಾಜಿ ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದವರು. ಅವರಲ್ಲಿ ಭೇದ ಭಾವ ಸಲ್ಲದು ಎಂದು ನುಡಿದರು.

ಸಮರ ಸೇನೆಯ ಪ್ರಕಾಶ, ಮಹಿಳಾ ಘಟಕದ ಉಪಾಧ್ಯಕ್ಷೆ ವೈ ಭಾಗ್ಯದೇವಿ, ಹರಿಣಿ, ಜಿಲ್ಲಾಧ್ಯಕ್ಷ ಯೋಗೇಶ, ಜಿ ಪಿ ಪ್ರಕಾಶ ಉಪಸ್ಥಿತರಿದ್ದರು.

# ಮೈಸೂರಿನಲ್ಲಿ ನಾಳೆ ವಿಶ್ವ ರೈತ ದಿನಾಚರಣೆಯ ರಾಜ್ಯ ಸಮಾವೇಶ

ದಾವಣಗೆರೆ, ಡಿ.24- ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಇದೇ ದಿನಾಂಕ 26 ರ ಭಾನುವಾರ ಬೆಳಿಗ್ಗೆ 11 ಕ್ಕೆ ಮೈಸೂರಿನ ಕಲಾ ಮಂದಿರದಲ್ಲಿ ವಿಶ್ವ ರೈತ ದಿನಾಚರಣೆಯ ರಾಜ್ಯಮಟ್ಟದ ಸಮಾವೇಶ ಹಾಗೂ ಕುರುಬೂರು ಶಾಂತಕುಮಾರ್ ಅವರ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಉಪಾಧ್ಯಕ್ಷ ತೇಜಸ್ವಿ ಪಟೇಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕೇಂದ್ರ ಸಚಿವ ಭಗವಂತ್ ಖೂಬಾ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದು, ರೈತರ ಆದಾಯ ದ್ವಿಗುಣ ಸಮಿತಿ ಮುಖ್ಯಸ್ಥ ಅಶೋಕ್ ದಳವಾಯಿ ರೈತ ಧ್ವನಿ ವಿಶೇಷಾಂಕ ಬಿಡುಗಡೆ ಮಾಡಲಿದ್ದಾರೆ ಎಂದರು.

ಪಬ್ಲಿಕ್ ಟಿ.ವಿ. ಮುಖ್ಯಸ್ಥ ಹೆಚ್.ಆರ್. ರಂಗನಾಥ್, ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದು, ವಿಶ್ವ ರೈತ ದಿನಾಚರಣೆ ಸಮಿತಿ ಅಧ್ಯಕ್ಷ ಡಾ. ಎಸ್. ಶಿವರಾಜಪ್ಪ ಆಶಯ ನುಡಿ ನುಡಿಯುವರು. ಮಧ್ಯಪ್ರದೇಶ ಸಂಯುಕ್ತ ಕಿಸಾನ್ ಮೋರ್ಚಾ ರಾಷ್ಟ್ರೀಯ ರೈತ ಮುಖಂಡ ಶಿವಕುಮಾರ್ ಕಕ್ಕಾ ಅಧ್ಯಕ್ಷತೆ ವಹಿಸಲಿದ್ದಾರೆ.

ಮಧ್ಯಾಹ್ನ 2.30 ರಿಂದ 4.30 ರವರೆಗೆ ಕೃಷಿ ಹಾಗೂ ರೈತ ಸಮಸ್ಯೆಗಳ ಕುರಿತು ವಿಚಾರ ಮಂಡನೆ ಮತ್ತು ಸಂವಾದ ನಡೆಯಲಿದೆ.

ತಜ್ಞರಾದ ಡಾ. ಪ್ರಕಾಶ್ ಕಮ್ಮರಡಿ, ನಾಗೇಶ್ ಹೆಗಡೆ, ಕೆ.ವಿ. ರಾಜು, ಶಿವಾನಂದ ಕಳವೆ, ಚುಕ್ಕಿ ನಂಜುಂಡಸ್ವಾಮಿ, ಅಭಿಮನ್ಯು ಕೋಹರ್, ದೈವ ಶಿಗಾಮಣಿ, ವಿ.ಆರ್. ನಾರಾಯಣ ರೆಡ್ಡಿ ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಕುಕ್ಕುವಾಡದ ಹನುಮೇಗೌಡ, ಹುಲ್ಲುಮನಿ ಠಾಕೂರ್, ಪೂಜಾರ ಅಂಜಿನಪ್ಪ, ಕರಿಬಸಪ್ಪ ಮತ್ತಿತರರಿದ್ದರು.


## ಸಾರ್ವಜನಿಕ ಪ್ರಕಟಣೆ

ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ನೀಲಾನಹಳ್ಳಿ ಗ್ರಾಮದ ಸರ್ವೆ ನಂ.12/2 ರಲ್ಲಿ 5 ಎಕರೆ 1 ಗುಂಟೆ ಮತ್ತು ಸದರಿ ಗ್ರಾಮದ ಸರ್ವೆ ನಂ. 12/3 ರಲ್ಲಿ 5 ಎಕರೆ ಜಮೀನುಗಳಿಗೆ ಸಂಬಂಧಿಸಿದಂತೆ ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ. ದಾವಣಗೆರೆ ಇಲ್ಲಿ ಪಾಲು ವಿಭಾಗಕ್ಕಾಗಿ **ರೇಣುಕ ತಂದೆ ಅಜ್ಜಪ್ಪ** ಇವರು ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆ ಸಂಖ್ಯೆ 616/2021 ಎಂದು ಇರುತ್ತದೆ.

ಸದರಿ ದಾವೆಯು ಇತ್ಯರ್ಥವಾಗುವವರೆಗೂ ಯಾರಾದರೂ ಯಾವುದೇ ರೀತಿಯ ಕ್ರಯ ಪರಭಾರೆ, ಮಾರಾಟ ಇತ್ಯಾದಿಗಳನ್ನು ಮಾಡಿಸಿಕೊಳ್ಳಬಾರದು. ಒಂದು ವೇಳೆ ಮಾಡಿಕೊಂಡಲ್ಲಿ ಅದರಿಂದಾಗುವ ನಷ್ಟಕ್ಕೆ ತಾವೇ ಜವಾಬ್ದಾರಿಯಾಗುತ್ತೀರಿ.

**ಸುರೇಶ್ ಕುಮಾರ್. ವೈ**
ವಕೀಲರು, ಹರಿಹರ


# ಅಂಗವಿಕಲರ ಪೋಷಕ ಸಂಘದಲ್ಲಿ ದಂತ ತಪಾಸಣೆ

ದಾವಣಗೆರೆ, ಡಿ.24- ದಂತ ವೈದ್ಯಕೀಯ ಮಹಾವಿದ್ಯಾಲಯದ ಮಕ್ಕಳ ದಂತ ವಿಭಾಗದಿಂದ ಅಂಗವಿಕಲರ ಪೋಷಕ ಸಂಘದಲ್ಲಿ ದಂತ ತಪಾಸಣೆಯನ್ನು ನಡೆಸಲಾಯಿತು. ದಂತ ಚಿಕಿತ್ಸೆಯನ್ನು ದಂತ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಡೆಸಲಾಗುವುದು. ಈ ಸಂದರ್ಭದಲ್ಲಿ ಮಕ್ಕಳ ದಂತ ಚಿಕಿತ್ಸಾ ವಿಭಾಗದ ವೈದ್ಯರುಗಳು ಉಪಸ್ಥಿತರಿದ್ದರು.

# ಜಿಎಂಐಟಿ ಕಾಲೇಜಿನಲ್ಲಿ ವಿಟಿಯು ವಲಯ ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿ



ದಾವಣಗರೆ, ಡಿ.24- ವಿಟಿಯು ಸೆಂಟ್ರಲ್ ಕರ್ನಾಟಕ ವಲಯ ಬಾಲಕರ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಯನ್ನು ನಗರದ ಜಿಎಂಐಟಿ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು. ಅದರಲ್ಲಿ ಒಂಭತ್ತು ತಂಡಗಳು ಭಾಗವಹಿಸಿದ್ದವು. ಮುಖ್ಯ ಅತಿಥಿಯಾಗಿ ಬಾಪೂಜಿ ಬಿಸಿಪಿಇ ಕಾಲೇಜಿನ ಪ್ರಾಂಶುಪಾಲ ಡಾ. ರಾಜ್ ಕುಮಾರ್ ಆಗಮಿಸಿದ್ದರು. ಜಿಎಂಐಟಿ ಪ್ರಾಂಶುಪಾಲ ಡಾ. ವೈ ವಿಜಯಕುಮಾರ್, ವೈ.ಯು. ಸುಭಾಶ್ಚಂದ್ರ ಮತ್ತು ಕ್ರೀಡಾ ಅಧಿಕಾರಿ ಡಾ. ಕಿರಣ್ ಕುಮಾರ್ ಎಚ್ ಎಸ್, ದೈಹಿಕ ಶಿಕ್ಷಣ ನಿರ್ದೇಶಕ ಜಿ.ಬಿ ಅಜ್ಜಯ್ಯ ಅವರ ನೇತೃತ್ವದಲ್ಲಿ ನಡೆದವು. ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ.ಗಿರೀಶ್ ಬಹುಮಾನ ವಿತರಿಸಿದರು. ಪ್ರಥಮ ಸ್ಥಾನವನ್ನು ಎಂಸಿಇ ಹಾಸನ ಕಾಲೇಜು ಮತ್ತು ದ್ವಿತೀಯ ಸ್ಥಾನವನ್ನು ಬಿಐಇಟಿ ಪಡೆದವು.


## ವ್ಯವಸಾಯಗಾರರ ಪರಿವರ್ತನಾ ಕೈಗಾರಿಕಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ ಲಿ.,

ಹೊಸ ಬಸ್‌ಸ್ಟ್ಯಾಂಡ್ ಹತ್ತಿರ, ಪಿ.ಬಿ. ರಸ್ತೆ, ದಾವಣಗೆರೆ-577003.
ಫೋನ್ : ಆಫೀಸ್ : 270245, ರೈಸ್‌ಮಿಲ್: 260321

### 2020-2021ನೇ ಸಾಲಿನ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಮೇಲ್ಕಂಡ ಸಂಘದ 2020-21ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 24.12.2021 ರಂದು ಕೋರಂ ಇಲ್ಲದ ಪ್ರಯುಕ್ತ ಮುಂದೂಡಲಾಗಿದ್ದು, ಸಭೆಯನ್ನು ದಿನಾಂಕ 30.12.2021ರಂದು ಗುರುವಾರ ಬೆಳಿಗ್ಗೆ 11 ಗಂಟೆಗೆ ಸಂಘದ ಅಕ್ಕಿ ಗಿರಣಿ ಆವರಣದಲ್ಲಿ, ಸಂಘದ ವಿಶೇಷಾಧಿಕಾರಿ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲು ಏರ್ಪಡಿಸಲಾಗಿದೆ. ಕಾರಣ ಮಾನ್ಯ ಸದಸ್ಯರು ಹಾಜರಾಗಲು ಕೋರಿದೆ.

ಸಹಿ/- **ಕಾರ್ಯದರ್ಶಿ**

ವಿ.ಸೂ. : ಈಗಾಗಲೇ ಸದಸ್ಯರಿಗೆ ಆಹ್ವಾನ ಪತ್ರಿಕೆಗಳನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಹಾಜರಾಗಬೇಕಾಗಿ ವಿನಂತಿ.



## IN THE COURT OF THE SENIOR CIVIL JUDGE AT HARAPANAHALLI

**M.A. No. 20/2019**

Appellant : Sri. M. Basavarajappa V/s-
Respondents : Sri S. Halesh and others
Respondent No-8 : Smt. Drakshayanamma W/o Shekharappa, Drakshayanamma D/o. Late Hallappa aged about 52 years, House wife, R/o Mudahadadi Village, Davangere Taluk and Dist.

**NOTICE/SUMMONS TO THE RESONDENT No-8**

Where as the appellant has filed the above numbered appeal before this court in order to set-aside the order in O.S. No. 152/2017 on the file of CJ. and J.M.F.C at Harapanahalli order dated-01.08.2019. In this case you being the respondent No.8 Good number of RP/AD Notices issued to you. Finally this is the through paper publication. you are hereby called upon to appear before this court on 18.01.2022 through your advocate at 11 am failing which the matter will heard and decided in your absence.

schedule : 2 acre of land at kadathi village taluk Harapanahalli, at sy No. 136/4 it is bounded by towards : East : Land belongs to Kadathi Millamma, West : Road, North-Land belongs to pundibharath,

South : Land belongs to Kadathi Yaraballara Mudukappa

It is given under my hand and seal on this day 22nd December 2021.

**Sd/- Shrinivas kalal, B.A. LLB.,**
**No. 211, MIG KNP Colony,**
**new court beside, Harihara-1.**
**Place : Harapanahalli, Date : 22.12.2021**

**By order of the Senior Civil Judge Court Harapanahalli.**



## ಗೌರವಾನ್ವಿತ ಒಂದನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ದಾವಣಗೆರೆ.

**ಅಮಲ್ಜಾರಿ ನಂ. 22/2020**

ಡಿಕ್ಕಿ ಹೋಲ್ಡರ್‌ಗಳು : 1) ಶ್ರೀ ಪಿ.ಎನ್. ಗುಡ್ಡೇಶಿ ಬಿನ್ ಲೇಟ್ ಪಿ.ಜೆ. ನಿಂಗೋಜಿರಾವ್, ವಯಸ್ಸು ಸುಮಾರು 55 ವರ್ಷ, 2) ಶ್ರೀಮತಿ ನೀಲಾಬಾಯಿ ಯಾನೇ ಶಾಂತಬಾಯಿ ಕೋಂ. ಆರ್.ಎನ್. ಗುಡ್ಡೇಶಿ, ಗೃಹಿಣಿ, ವಯಸ್ಸು ಸುಮಾರು 44 ವರ್ಷ, ಇಬ್ಬರ ವಿಳಾಸ : ಡೋರ್ ನಂ. 335/1, ಮ್ಯಾಸಬೇಡರ ಕೇರಿ, ದಾವಣಗೆರೆ. - ವಿರುದ್ಧ -

ಜಡ್ಜ್‌ಮೆಂಟ್ ಡೇಟರ್‌ಗಳು : 1) ಹೆಚ್.ವಿ. ಗೋಪಾಲರಾವ್ ಸಾವಂತ್ ಬಿನ್ ಲೇಟ್ ಜಿ. ವಿಠೋಬರಾವ್, ವಯಸ್ಸು ಸುಮಾರು 52 ವರ್ಷ, 2) ಹೆಚ್.ವಿ. ಅಶ್ವಿನಿಕುಮಾರ್ ಬಿನ್ ಲೇಟ್ ಜಿ. ವಿಠೋಬರಾವ್, ವಯಸ್ಸು ಸುಮಾರು 45 ವರ್ಷ, ದಲ್ಲಾಲಿ ಮಂಡಿ ವ್ಯಾಪಾರ, ಇಬ್ಬರ ವಿಳಾಸ : ರೈತರ ಬೀದಿ, ಅರುಣ ಟಾಕೀಸ್ ಹಿಂಭಾಗ, ದಾವಣಗೆರೆ.

ಆದೇಶ-5 ನಿಯಮ-20ರ ವ್ಯವಹಾರ ಪ್ರಕ್ರಿಯಾ ಸಂಹಿತೆ ಪ್ರಕಾರ ಜಡ್ಜ್‌ಮೆಂಟ್ ಡೇಟರ್‌ಗಳಿಗೆ ಸಮನ್ಸ್

ಮೇಲ್ಕಂಡ ಅಮಲ್ಜಾರಿ ಅರ್ಜಿಯನ್ನು ಡಿಕ್ರಿ ಹೋಲ್ಡರ್‌ಗಳು ಜಡ್ಜ್‌ಮೆಂಟ್ ಡೇಟರ್ ನಂ.1 ಮತ್ತು 2 ರವರ ಮೇಲೆ ಹಾಕಲಾಗಿದೆ. ಮೇಲಿನ ಅಮಲ್ಜಾರಿ ಕೇಸನ್ನು ಘನ ನ್ಯಾಯಾಲಯದ ಅಸಲು ದಾವೆ ನಂ. 49/2016ರ ಜಡ್ಜ್‌ಮೆಂಟ್ ಮತ್ತು ಡಿಕ್ರಿ ಆದೇಶದ ಮೇಲೆ ಹಾಕಲಾಗಿದೆ. ಘನ ನ್ಯಾಯಾಲಯದ ಡಿಕ್ರಿಯಲ್ಲಿ ಜಡ್ಜ್‌ಮೆಂಟ್ ಮತ್ತು ಡಿಕ್ರಿಯಲ್ಲಿ ಜಡ್ಜ್‌ಮೆಂಟ್ ಡೇಟರ್ ರವರಿಗೆ ರೂ. 2,75,000/-ಗಳನ್ನು ಹಣ ಪಾವತಿಸಿದರೇ, ಷೆಡ್ಯೂಲ್-ಎ ಮತ್ತು ಬಿ ಆಸ್ತಿಯನ್ನು ಡಿಕ್ರಿ ಹೋಲ್ಡರ್‌ರವರ ಹೆಸರಿಗೆ ಅವರ ಖರ್ಚಿನಲ್ಲಿ ಜಡ್ಜ್‌ಮೆಂಟ್ ಡೇಟರ್ ರವರು ಕ್ರಯಪತ್ರ ನೋಂದಾವಣೆ ಮಾಡಿಕೊಡುವುದಕ್ಕಾಗಿ ಈ ಅಮಲ್ಜಾರಿ ಹಾಕಲಾಗಿದೆ. ಜಡ್ಜ್‌ಮೆಂಟ್ ಡೇಟರ್‌ರವರುಗಳು ನ್ಯಾಯಾಲಯದ ನೋಟಿಸ್, ಸಮನ್ಸ್ ಮತ್ತು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ ನೋಟಿಸ್‌ಗಳನ್ನು ತೆಗೆದುಕೊಳ್ಳದೇ, ತಪ್ಪಿಸಿಕೊಳ್ಳುತ್ತಿರುವುದರಿಂದ, ಘನ ನ್ಯಾಯಾಲಯವು ಪತ್ರಿಕಾ ಪ್ರಕಟಣೆಯ ಮೂಲಕ ಜಡ್ಜ್‌ಮೆಂಟ್ ಡೇಟರ್‌ಗಳಿಗೆ ತಲುಪಿಸಲು ಆದೇಶಿಸಲಾಗಿದೆ.

ಘನ ನ್ಯಾಯಾಲಯ ಜಡ್ಜ್‌ಮೆಂಟ್ ಡೇಟರ್‌ಗಳ ಹಾಜರಾತಿಗಾಗಿ ದಿನಾಂಕ : 04.02.2022 ರಂದು ಮುದ್ದತ್ತು ನಿಗದಿ ಪಡಿಸಿರುತ್ತದೆ. ಆದ್ದರಿಂದ ಸದರಿ ತಾರೀಖಿನಂದು ನೀವು ಖುದ್ದಾಗಿ ಆಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಬೆಳಿಗ್ಗೆ 11.00 ಗಂಟೆಗೆ ಹಾಜರಾಗಿ ನಿಮ್ಮ ತಕರಾರು ಇದ್ದರೇ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಮೇಲ್ಕಂಡ ಅರ್ಜಿಯನ್ನು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು.

ಷೆಡ್ಯೂಲ್ "ಎ" : ದಾವಣಗೆರೆ ತಾಲ್ಲೂಕು, ಹಿರಿಯ ಉಪ ನೋಂದಣಾಧಿಕಾರಿಗಳವರ ಕಛೇರಿ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಬಾತಿ ಗ್ರಾಮದ ರೀ. ಸರ್ವೆ ನಂ. 160/1ಪಿ5, ವಿಸ್ತೀರ್ಣ 1-28 ಗುಂಟೆವುಳ್ಳ ಜಮೀನು, ಇದರಲ್ಲಿ ಖರಾಬು 0-04 ಗುಂಟೆ ವಜಾ ಜಾತ ವಿಸ್ತೀರ್ಣ ಎಕರೆ-ಒಂದು, ಗುಂಟೆ-ಇಪ್ಪತ್ನಾಲ್ಕು (1.24) ಆಕಾರ ರೂ. 1.70 ಪೈಸೆವುಳ್ಳ ಖುಷ್ಕಿ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ - ಮಹದೇವಪ್ಪನವರ ಜಮೀನು, ಪಶ್ಚಿಮಕ್ಕೆ : ನಿಮ್ಮಬಾಬ್ತು ಜಮೀನು, ಉತ್ತರಕ್ಕೆ - ಹಳ್ಳ, ದಕ್ಷಿಣಕ್ಕೆ-ಹಳೇ ಬಾತಿಗೆ ಹೋಗುವ ರಸ್ತೆ, ಈ ಮಧ್ಯದ ಜಮೀನು.

ಷೆಡ್ಯೂಲ್: ದಾವಣಗೆರೆ ತಾಲ್ಲೂಕು, ಹಿರಿಯ ಉಪ ನೋಂದಣಾಧಿಕಾರಿಗಳವರ ಕಛೇರಿ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಬಾತಿ ಗ್ರಾಮದ ರೀ. ಸರ್ವೆ ನಂ. 160/1ಪಿ4, ವಿಸ್ತೀರ್ಣ 1.31 ಗುಂಟೆವುಳ್ಳ ಜಮೀನು, ಇದರಲ್ಲಿ ಖರಾಬು 0.04 ಗುಂಟೆ ವಜಾ ಜಾತ ವಿಸ್ತೀರ್ಣ ಎಕರೆ-ಒಂದು, ಗುಂಟೆ-ಇಪ್ಪತ್ತೇಳು (1.27) ಆಕಾರ ರೂ. 1.71 ಪೈಸೆವುಳ್ಳ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ನಿಮ್ಮಬಾಬ್ತು ಜಮೀನು, ಪಶ್ಚಿಮಕ್ಕೆ : ಕೆ.ಜಿ. ಚಂದ್ರಪ್ಪನವರ ಜಮೀನು, ಉತ್ತರಕ್ಕೆ : ಹಳ್ಳ, ದಕ್ಷಿಣಕ್ಕೆ - ಹಳೇಬಾತಿಗೆ ಹೋಗುವ ರಸ್ತೆ-ಈ ಮಧ್ಯದ ಜಮೀನು. ಘನ ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ : 23.12.2021 ರಂದು ನೀಡಲಾಗಿದೆ.

**ಡಿಕ್ರಿ ಹೋಲ್ಡರ್‌ರವರ ಪರ ವಕೀಲರು, ಶ್ರೀ ಕೆ. ತಿಮ್ಮಪ್ಪ,**
**ಶ್ರೀ ಹೆಚ್. ದಿವಾಕರ್, ವಕೀಲರು, ದಾವಣಗೆರೆ.**
**ಸ್ಥಳ : ದಾವಣಗೆರೆ, ದಿನಾಂಕ : 23.12.2021**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು, ಘನ 1ನೇ ಹೆಚ್ಚುವರಿ ಸಿವಿಲ್ ಜಡ್ಜ್**
**ನ್ಯಾಯಾಲಯ (ಹಿ.ವಿ.) ಮತ್ತು JMFC ದಾವಣಗೆರೆ.**

# ರೈತರು ಸಮಗ್ರ ಬೆಳೆಗಳ ಕೃಷಿಗೆ ಆಸಕ್ತಿ ವಹಿಸಬೇಕು

## ಜಗಳೂರು ತಾಲ್ಲೂಕು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಶ್ರೀನಿವಾಸುಲು



ಜಗಳೂರು, ಡಿ.24- ತಾಲ್ಲೂಕಿನಲ್ಲಿ ಅಡಿಕೆ ಬೆಳೆಗೆ ಯಥೇಚ್ಛವಾಗಿ ರೈತರು ಆಸಕ್ತಿ ತೋರಿಸುತ್ತಾರೆ. ಬದಲಾಗಿ ಸಮಗ್ರ ಬೆಳೆಗಳ ಕೃಷಿಗೆ ಆಸಕ್ತಿ ವಹಿಸಬೇಕು ಎಂದು ಸಹಾಯಕ ಕೃಷಿ ನಿರ್ದೇಶಕ ಶ್ರೀನಿವಾಸುಲು ತಿಳಿಸಿದರು.

ತಾಲ್ಲೂಕಿನ ರಂಗಾಪುರ ಗ್ರಾಮದಲ್ಲಿ ಕೃಷಿ ಇಲಾಖೆ ಹಾಗೂ ತಾಲ್ಲೂಕು ಕೃಷಿಕ ಸಮಾಜ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ರೈತ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಣ್ಣಿನೊಂದಿಗೆ ಮಾತುಕತೆ ಎಂಬ ವಿಷಯ ಕುರಿತು ರೈತರಿಗೆ ಮಾಹಿತಿ ನೀಡಿದ ಅವರು, ರೈತರು ಭೂಮಿ ಗುಣಗಳನ್ನು ತಿಳಿದುಕೊಳ್ಳಬೇಕು. ಕೊಟ್ಟಿಗೆ ಗೊಬ್ಬರ ಬಳಕೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಕೃಷಿ ಕ್ಷೇತ್ರದಲ್ಲಿ ಆಗುತ್ತಿರುವ ಹೊಸ ಪ್ರಯೋಗಗಳು ಮತ್ತು ಕೃಷಿಯಲ್ಲಿ ಬದಲಾವಣೆಗಳ ಕುರಿತು ರೈತರು ಸಮಗ್ರ ಮಾಹಿತಿ, ಮಾರ್ಗದರ್ಶನ ತಜ್ಞರಿಂದ ಪಡೆದುಕೊಳ್ಳಬೇಕು. ರೈತಪರ ಹೋರಾಟಗಾರರು ಹಾಗೂ ಭಾರತದ ಐದನೇ ಪ್ರಧಾನ ಮಂತ್ರಿ ಚೌಧರಿ ಚರಣ್ ಸಿಂಗ್ ಇವರ ಹುಟ್ಟಿದ ದಿನದ ಅಂಗವಾಗಿ, ಪ್ರತಿವರ್ಷ ಈ ದಿನವನ್ನು ರೈತರ ದಿನವೆಂದು ಆಚರಿಸಲಾಗುತ್ತದೆ ಎಂದರು.

ಚದರಗೊಳ್ಳದ ಅರುಣ್ ಕುಮಾರ್ ತಾವು ಬೆಳೆದ ರೇಷ್ಮೆ ಮತ್ತು ವಿವಿಧ ಬೆಳೆಗಳ ಕುರಿತು ಮತ್ತು ಜೀವಾಮೃತ ಸಾವಯವ ಕುರಿತು ಅವರ ಅನುಭವ ಹಂಚಿಕೊಂಡರು. ಮಲೆ ಮಾಚಿಕೆರೆ ಯು.ಬಿ.ರಾಜಣ್ಣ ತಾವು ಬೆಳೆದ ಡ್ರ್ಯಾಗನ್ ಫ್ರೂಟ್ಸ್ ಕುರಿತು ಸಾಗುವಳಿ ಮತ್ತು ಮಾರುಕಟ್ಟೆ ಬಗ್ಗೆ ಮಾಹಿತಿ ನೀಡಿದರು.

ಪ್ರಗತಿಪರ ರೈತರಾದ ನಾಗರಾಜ್ ಮಾತನಾಡಿ, ಸಮಗ್ರ ಬೆಳೆಗಳನ್ನು ಬೆಳೆದರೆ ಮುಂದಿನ ಪೀಳಿಗೆಗೆ ಫಲವತ್ತಾದ ಮಣ್ಣನ್ನು ಉಳಿಸಿ ಸಾವಯವ ಬೇಸಾಯಕ್ಕೆ ಬಳಸಬೇಕು ಎಂದು ಕರೆ ನೀಡಿದರು.

# ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸಲು ಮನವಿ



ದಾವಣಗೆರೆ, ಡಿ.24- ರಾಜ್ಯಾದ್ಯಾಂತ ಪದವಿ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಅಖಿಲ ಭಾರತ ಯುವಜನ ಫೆಡರೇಷನ್ ಸದಸ್ಯರು ನಗರದಲ್ಲಿಂದು ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಅವರ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಅತಿಥಿ ಉಪನ್ಯಾಸಕರು ನ್ಯಾಯಸಮ್ಮತ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ, ಕಳೆದ ಹಲವಾರು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ರಾಜ್ಯದ ಶೈಕ್ಷಣಿಕ ಪ್ರಗತಿಗೆ ಅತಿಥಿ ಉಪನ್ಯಾಸಕರು ಹಗಲಿರುಳು ಅಲ್ಪ ಗೌರವ ಧನಕ್ಕೆ ಹಲವಾರು ವರ್ಷಗಳಿಂದ ದುಡಿಯುತ್ತಿದ್ದಾರೆ. ಪ್ರತಿ ವರ್ಷ ಗೌರವ ಧನ ಹೆಚ್ಚಳ ಸೇರಿದಂತೆ, ಸೇವಾ ಭದ್ರತೆಗಾಗಿ ಸರ್ಕಾರ ಮನವಿ ಸಲ್ಲಿಸುತ್ತಿದ್ದರೂ ಈ ಬಗ್ಗೆ ಯಾವುದೇ ಕ್ರಮ ವಹಿಸಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಹೆಚ್ಚಿನ ವಿದ್ಯಾರ್ಹತೆ ಪಡೆದಿದ್ದರೂ ಸೂಕ್ತ ಉದ್ಯೋಗ ಅವಕಾಶಗಳು ದೊರಕದೆ ಪದವೀಧರರು ಕಷ್ಟ ಅನುಭವಿಸುತ್ತಿದ್ದು, ತಮ್ಮ ಬದುಕಿನ ನಿರ್ವಹಣೆಗೆ ಅನಿವಾರ್ಯವಾಗಿ ಕಡಿಮೆ ಗೌರವ ಧನಕ್ಕೆ ದುಡಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಂದಿನ ಬೆಲೆ ಏರಿಕೆ ಕಾಲದಲ್ಲಿ ಸರ್ಕಾರ ಇಂದು ಕೊಡುತ್ತಿರುವ ಅಲ್ಪ ಗೌರವ ಧನ ಯಾವುದಕ್ಕೂ ಸಾಲುತ್ತಿಲ್ಲ. ವಿವಿಧ ರಾಜ್ಯಗಳಿಗೆ ಹೋಲಿಕೆ ಮಾಡಿಕೊಂಡರೆ ರಾಜ್ಯದಲ್ಲಿ ಅತಿಥಿ ಉಪನ್ಯಾಸಕರಿಗೆ ಅತ್ಯಂತ ಕಡಿಮೆ ಗೌರವ ಧನ ಕೊಡಲಾಗುತ್ತಿದೆ. ಸರ್ಕಾರಗಳು ಪದವೀಧರರನ್ನು ಕಡೆಗಣಿಸುತ್ತಿರುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಈಗಾಗಲೇ ಹಲವಾರು ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ದುಡಿಯುತ್ತಿರುವವರಿಗೆ ಸರ್ಕಾರ ಸೇವಾ ಭದ್ರತೆಯನ್ನು ನೀಡಬೇಕು. ಗೌರವ ಧನ ಹೆಚ್ಚಿಸಬೇಕೆಂದು ಆಗ್ರಹಿಸಿದರು.

ಈ ವೇಳೆ ಎಐವೈಎಫ್ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು, ಜಿಲ್ಲಾಧ್ಯಕ್ಷ ಕೆರನಹಳ್ಳಿ ರಾಜು, ಜಿಲ್ಲಾ ಕಾರ್ಯದರ್ಶಿ ಎ. ತಿಪ್ಪೇಶಿ, ಉಪಾಧ್ಯಕ್ಷ ನಿಟ್ಟುವಳ್ಳಿ ಜೀವನ್, ಫಜಲುಲ್ಲಾ, ಇರ್ಫಾನ್, ಮಂಜುನಾಥ ಸೇರಿದಂತೆ ಇತರರು ಭಾಗವಹಿಸಿದ್ದರು.

# ಗುತ್ತಿಗೆದಾರನಿಗೆ ವಂಚನೆ

**ಪಿಎಂ ಮುದ್ರಾ ಯೋಜನೆಯಲ್ಲಿ ಸಾಲದ ಆಮಿಷ**

ದಾವಣಗೆರೆ, ಡಿ.24- ಪಿಎಂ ಮುದ್ರಾ ಯೋಜನೆಯ ಅಧಿಕಾರಿ ಸೋಗಿನಲ್ಲಿ ಸಾಲ ನೀಡುವುದಾಗಿ ನಂಬಿಸಿ, ಸಾಲ ಮಂಜೂರಾತಿಗೆ ವಿವಿಧ ಕಾರಣಗಳೊಡ್ಡಿ ಖಾಸಗಿ ಗುತ್ತಿಗೆದಾರರೋರ್ವರಿಗೆ 72,500 ರೂ. ಹಣವನ್ನು ಆನ್‌ಲೈನ್ ಮೂಲಕ ವಂಚಿಸಿರುವ ಬಗ್ಗೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಜಗಳೂರು ತಾಲ್ಲೂಕು ಕಣಕುಪ್ಪೆ ಗ್ರಾಮದ ಪಿ. ಲೋಕೇಶ್ ವಂಚನೆಗೊಳಗಾದ ಖಾಸಗಿ ಗುತ್ತಿಗೆದಾರ. ಲೋಕೇಶ್ ಅವರ ಮೊಬೈಲ್ ಸಂಖ್ಯೆಗೆ ಕ್ಯೂಪಿ-ಇಎನ್ ವಿಎಂಎನ್ ಟಿ ಯಿಂದ ಸಂದೇಶ ಬಂದಿದ್ದು, ಪಿಎಂಇಜಿಪಿ ಲೋನ್ ಯೋಜನೆಯಲ್ಲಿ 25 ಲಕ್ಷ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವುದಾಗಿ ತಿಳಿಸಿ, ದೂರವಾಣಿ ಸಂಖ್ಯೆ ನೀಡಲಾಗಿತ್ತು. ಇದನ್ನು ನಂಬಿ ದೂರವಾಣಿ ಮುಖೇನ ಸಂಪರ್ಕಿಸಿದಾಗ, ಅಪರಿಚಿತನು ತಾನು ಪಿಎಂ ಮುದ್ರಾ ಯೋಜನೆಯ ಅಧಿಕಾರಿ ಎಂದು ಪರಿಚಯಿಸಿಕೊಂಡ.

ಆತನ ಬಳಿ ಲೋಕೇಶ್ ತನಗೆ 5 ಲಕ್ಷ ಸಾಲ ಬೇಕೆಂದಿದ್ದಾರೆ. ಇದನ್ನೇ ಬಂಡವಾಳವಾಗಿಸಿಕೊಂಡ ಅಪರಿಚಿತ ವಂಚಕನು ಈ ಕೃತ್ಯ ನಡೆಸಿದ್ದಾನೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಲೋಕೇಶ್ ತಿಳಿಸಿದ್ದಾರೆ.

# ರಾಯಣ್ಣ ಪ್ರತಿಮೆ ವಿರೂಪ ಖಂಡಿಸಿ ಪ್ರತಿಭಟನೆ



**ಜಗಳೂರು**

ಜಗಳೂರು, ಡಿ.24- ಸಂಗೊಳ್ಳಿ ರಾಯಣ್ಣನ ಪ್ರತಿಮೆ ವಿರೂಪಗೊಳಿಸಿ ಪುಂಡಾಟಿಕೆ ಮೆರೆದಿರುವ ಎಂಇಎಸ್ ಸಂಘಟನೆ ನಿಷೇಧಕ್ಕಾಗಿ ಆಗ್ರಹಿಸಿ ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗ ಹಾಗೂ ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಮಹಾತ್ಮ ಗಾಂಧಿ ವೃತ್ತದ ಮೂಲಕ ಅಂಬೇಡ್ಕರ್ ವೃತ್ತದಿಂದ ತಹಶೀಲ್ದಾರ್ ಕಛೇರಿ ಮುಂಭಾಗ ಜಮಾಯಿಸಿ ಪ್ರಭಾರಿ ತಹಶೀಲ್ದಾರ್ ಶಶಿಧರ ಸ್ವಾಮಿ ಅವರಿಗೆ ಲಿಖಿತ ಮನವಿ ಸಲ್ಲಿಸಿದರು.

ಕೆಪಿಸಿಸಿ ಎಸ್.ಟಿ ಘಟಕ ರಾಜ್ಯಾಧ್ಯಕ್ಷ, ಕೆ.ಪಿ. ಪಾಲಯ್ಯ ಮಾತನಾಡಿ, ಬ್ರಿಟಿಷರ ವಿರುದ್ಧ ಹೋರಾಡಿದ ಅಪ್ರತಿಮ ಹೋರಾಟಗಾರ, ದೇಶಭಕ್ತ ಸಂಗೊಳ್ಳಿ ರಾಯಣ್ಣ ಪ್ರತಿಮೆ ವಿರೂಪಗೊಳಿಸಿರುವ ಎಂಇಎಸ್ ಪುಂಡಾಟಿಕೆಗೆ ಕಡಿವಾಣ ಹಾಕಿ ನಿಷೇಧಿಸಬೇಕು ಎಂದು ಒತ್ತಾಯಿಸಿದರು.

ನಿವೃತ್ತ ಉಪನ್ಯಾಸಕ ತಿಮ್ಮಣ್ಣ ಮಾತನಾಡಿ, ಎಂಇಎಸ್ ಸಂಘಟನೆ ಬಗ್ಗೆ ಪೊಲೀಸ್ ಇಲಾಖೆ ನಿಗಾವಹಿಸುವಲ್ಲಿ ವಿಫಲವಾಗಿದೆ. ಸಮಾಜದಲ್ಲಿ ಸಾಮರಸ್ಯ ಹಾಳು ಮಾಡುವ ಸಂಘಟನೆಗಳನ್ನು ರಾಜ್ಯದಿಂದ ಗಡೀಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪ್ರಗತಿಪರ ಸಂಘಟನೆ ಮುಖಂಡ ಎಂ. ರಾಜಪ್ಪ, ಮಹಾಲಿಂಗಪ್ಪ, ಸತೀಶ್ ಮಲೆ ಮಾಚಿಕೆರೆ, ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗದ ಗಿರೀಶ್ ಒಡೆಯರ್, ನಾಗಲಿಂಗಪ್ಪ, ಸಿದ್ದಪ್ಪ, ತಿಪ್ಪೇಸ್ವಾಮಿ, ರಂಗಸ್ವಾಮಿ, ನಾಗರಾಜ್, ಮಾದಿಹಳ್ಳಿ ಮಂಜಪ್ಪ, ಅನಂತರಾಜ್, ಅಂಜಿನಪ್ಪ, ವೀರಣ್ಣ, ತಿಪ್ಪೇಸ್ವಾಮಿ, ಜೀವನ್, ಗೌರಿಪುರ ನಾಗರಾಜ್ ಮುಂತಾದವರು ಭಾಗವಹಿಸಿದ್ದರು.

# ಕನ್ನಡ ಧ್ವಜಕ್ಕೆ ಅವಮಾನ ಹರಿಹರದ ಕರವೇ ಖಂಡನೆ



ಹರಿಹರ, ಡಿ. 24- ಮಹಾರಾಷ್ಟ್ರ ಶಿವಸೇನಾ ಮುಖ್ಯಸ್ಥರು ಕೊಲ್ಲಾಪುರ ಜಿಲ್ಲೆಯಲ್ಲಿ ಕನ್ನಡ ಧ್ವಜ ಸುಟ್ಟು ಹಾಕುವ ಮೂಲಕ ನಾಡದ್ರೋಹದ ಕೃತ್ಯ ಎಸಗಿದ್ದಾರೆ. ಇಂತಹ ಸಂಘಟನೆಗಳನ್ನು ಮಹಾರಾಷ್ಟ್ರ ಸರ್ಕಾರ ಬೆಂಬಲಿಸುತ್ತಿದೆ ಎಂದು ಕರವೇ (ಪ್ರವೀಣ್ ಶೆಟ್ಟಿ ಬಣ) ಜಿಲ್ಲಾ ಘಟಕ ಹಾಗೂ ತಾಲ್ಲೂಕು ಘಟಕದ ಪದಾಧಿಕಾರಿಗಳು, ಕಾರ್ಯಕರ್ತರು ಖಂಡಿಸಿದ್ದಾರೆ.

ಮಹಾರಾಷ್ಟ್ರ ಶಿವಸೇನೆ ಮತ್ತು ಎಂಇಎಸ್ ಸಂಘಟನೆಗಳನ್ನು ಕರ್ನಾಟಕದಲ್ಲಿ ಕೂಡಲೇ ನಿಷೇಧಿಸಬೇಕು ಎಂದು ಒತ್ತಾಯಿಸಿ ತಾಲ್ಲೂಕು ತಹಶೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕರವೇ ಹರಿಹರ ತಾಲ್ಲೂಕು ಅಧ್ಯಕ್ಷ ವೈ. ರಮೇಶ್ ಮಾನೆ, ಕಾರ್ಯಾಧ್ಯಕ್ಷ ಪ್ರೀತಂ ಬಾಬು, ಗೌರವಾಧ್ಯಕ್ಷ ಸುಬ್ರಹ್ಮಣ್ಯ ನಾಡಿಗೇರ್, ಕಾರ್ಯದರ್ಶಿ ಯಮನೂರು, ಉಪಾಧ್ಯಕ್ಷರಾದ ಅಣ್ಣಪ್ಪ ಲೋಕಿಕೆರೆ, ಇಮ್ತಿಯಾಜ್ ಅಹ್ಮದ್, ರಂಜಿತ್ ಹೆಗ್ಡೆ, ಅಲಿ ಅಕ್ಬರ್, ಅಣ್ಣಪ್ಪ, ಹನುಮಂತರೆಡ್ಡಿ, ಶಶಿನಾಯ್ಕ, ರಾಮು, ರವಿ, ಶಿವು, ಜಿಲ್ಲಾಧ್ಯಕ್ಷ ನಾಗರಾಜ್ ಜಮ್ನಳ್ಳಿ, ಜಿಲ್ಲಾ ಉಪಾಧ್ಯಕ್ಷರಾದ ಮುನ್ನ, ಗಜೇಂದ್ರ ಉಪಸ್ಥಿತರಿದ್ದರು.

# ಪುನೀತ್ ಪುತ್ಥಳಿ ಅನಾವರಣದಲ್ಲಿ ಗಣಹೋಮ



ದಾವಣಗೆರೆ, ಡಿ. 24- ಚಿಕ್ಕಮ್ಮಣ್ಣಿ ದೇವರಾಜ್ ಅರಸ್ ಸರ್ಕಲ್‌ನಲ್ಲಿ ಕೆ.ಎಚ್. ರೇವಣ್ಣ ಸಿದ್ದಪ್ಪ ಮತ್ತು ಅವರ ಧರ್ಮಪತ್ನಿ ರೇಖಾ ಅವರ ನೇತೃತ್ವದಲ್ಲಿ ಪುನೀತ್ ರಾಜಕುಮಾರ್ ಪ್ರತಿಮೆ ಅನಾವರಣಗೊಂಡ 14ನೇ ದಿನಕ್ಕೆ ಅವರ ಆತ್ಮ ಶಾಂತಿಗಾಗಿ ಗಣಹೋಮ ಮತ್ತು ಸುದರ್ಶನ ಹೋಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಹೆಚ್. ತಿಮ್ಮಣ್ಣ, ವೀರೇಶ್ ಓ., ಲೋಕಪ್ಪ, ರಾಜಪ್ಪ, ಓ.ಎಚ್ ರಾಜಪ್ಪ ಪ್ಲಂಬರ್, ಬಸವರಾಜಪ್ಪ ಎಂ.ಎಸ್., ಸುರೇಶ್, ಮಹೇಶ್, ನಾಗೇಶ್, ಕಿರಣ್, ಅಂಜನಿ, ಹನುಮಂತಪ್ಪ, ಮುಕ್ಕಣ್ಣ, ಚಂದ್ರಶೇಖರ್ ಪಾಲ್ಗೊಂಡಿದ್ದರು.

# ಎಂಇಎಸ್ ರದ್ದತಿಗೆ ಆಗ್ರಹ

ದಾವಣಗೆರೆ, ಡಿ.24- ರಾಜ್ಯದಲ್ಲಿ ಪದೇ ಪದೇ ನೆಲ-ಜಲ-ಗಡಿ, ಭಾಷೆಯ ವಿಚಾರಗಳಲ್ಲಿ ಪುಂ ಡಾಟಿಕೆಗೆ ಕಾರಣವಾದ ಎಂಇಎಸ್ ಸಂಘಟನೆಯವರು ಮಹಾನ್ ಪುರುಷ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಭಗ್ನಗೊಳಿಸಿ ಕನ್ನಡದ ಬಾವುಟಕ್ಕೆ ಬೆಂಕಿ ಹಚ್ಚುವ ಕೃತ್ಯಕ್ಕೆ ಮುಂದಾಗಿರುವ ಸಂಘಟನೆಯನ್ನು ತಕ್ಷಣಕ್ಕೆ ಜಾರಿಗೆ ಬರುವಂತೆ ನಿಷೇಧಿಸುವಂತೆ ಜಿಲ್ಲಾ ಹಿತರಕ್ಷಣಾ ಒಕ್ಕೂಟದ ಅಧ್ಯಕ್ಷ ಬಿ.ವಿ. ರಾಜಶೇಖರ, ಕಾರ್ಯದರ್ಶಿ ಡಾ. ಕೆ.ಎಸ್.ಗಂಗಾಧರ, ಹೆಚ್. ಜಯಣ್ಣ, ಹೆಚ್.ವಿ. ಹಾಲೇಶ್, ಶಿವಮೂರ್ತಿಸ್ವಾಮಿ ಮತ್ತು ಇತರರು ಸರ್ಕಾರವನ್ನು ಆಗ್ರಹಿಸಿದ್ದಾರೆ.

# ನಿಟುವಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಸಮುದಾಯದತ್ತ ಶಾಲೆ ಕಾರ್ಯಕ್ರಮ



ದಾವಣಗೆರೆ, ಡಿ. 24 - ನಗರದ ನಿಟ್ಟುವಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಸಮುದಾಯದತ್ತ ಶಾಲಾ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕರು ಎಂ. ಸುರೇಶ್ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿಯ ಆರ್ ತಿಪ್ಪೇಸ್ವಾಮಿ, ವಿದ್ಯಾ, ಕೋಮಲ ಮತ್ತು ಪೋಷಕರು, ಎಲ್ಲಾ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಸಿಬ್ಬಂದಿ ವರ್ಗದವರು ಮಕ್ಕಳ ಪೋಷಕರಿಗೆ ಅವರ ಮಕ್ಕಳ ಪ್ರಗತಿಯನ್ನು ಅವರ ವಿಷಯವಾರು ತೋರಿಸಿ ಮಾಹಿತಿ ನೀಡಿದರು. ಕೆ.ಟಿ. ಜಯಪ್ಪ ಸ್ವಾಗತಿಸಿದರು. ಕಮಲಮ್ಮ ವಂದಿಸಿದರು.

# ಎಟಿಎಂ ಕಾರ್ಡ್ ಅಪ್‌ಡೇಟ್ ನೆಪ ಕೆಪಿಟಿಸಿಎಲ್ ನೌಕರನಿಗೆ ವಂಚನೆ

ದಾವಣಗೆರೆ, ಡಿ.24- ಬ್ಯಾಂಕ್ ಮ್ಯಾನೇಜರ್ ಎಂದು ನಂಬಿಸಿ ಎಟಿಎಂ ಕಾರ್ಡ್ ಅಪ್‌ಡೇಟ್ ಮಾಡುವುದಾಗಿ ಕುಂಟು ನೆಪ ಹೇಳಿ 70 ಸಾವಿರಕ್ಕೂ ಅಧಿಕ ಹಣವನ್ನು ಕೆಪಿಟಿಸಿಎಲ್ ನೌಕರರೋರ್ವರಿಗೆ ಆನ್‌ಲೈನ್ ಮೂಲಕ ವಂಚಿಸಿರುವ ಬಗ್ಗೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಜಯನಗರ ಬಿ ಬ್ಲಾಕ್ ಮೂಲದವರಾದ ಹೆಚ್. ಗುರುಬಸವರಾಜ ವಂಚನೆಗೊಳಗಾದವರು. ಕೆಪಿಟಿಸಿಎಲ್ ನೌಕರರಾದ ಇವರು ಚನ್ನಗಿರಿ ತಾಲ್ಲೂಕು ಮುರುಘರಾಜೇಂದ್ರ ಬಡಾವಣೆಯ ವಾಸಿ. ಇದೇ ಡಿ.20ರಂದು ಮೊಬೈಲ್ ಸಂಖ್ಯೆಗೆ ಅಪರಿಚಿತನೋರ್ವ ದೂರವಾಣಿ ಮುಖಾಂತರ ಸಂಪರ್ಕಿಸಿ ತಾನು ಕೆನರಾ ಬ್ಯಾಂಕ್ ಮ್ಯಾನೇಜರ್ ಎಂದು ಪರಿಚಿತನಾಗಿ, ನಿಮ್ಮ ಎಟಿಎಂ ಕಾರ್ಡ್ ಬ್ಲಾಕ್ ಆಗಿದ್ದು, ಅಪ್‌ಡೇಟ್ ಮಾಡುವುದಾಗಿ ನಂಬಿಸಿ ಎಟಿಎಂ ಕಾರ್ಡ್ ಮಾಹಿತಿ ಕೇಳಿದ್ದು, ಅದರಂತೆ ಗುರುಬಸವರಾಜ ಮಾಹಿತಿ ನೀಡಿದ್ದಾರೆ. ಅಲ್ಲದೇ, ಅಪರಿಚಿತನ ಮಾತಿನಂತೆ ಮೊಬೈಲ್ ಸಂಖ್ಯೆಗೆ ಬಂದ 4 ಬಾರಿಯ ಒಟಿಪಿ ಮಾಹಿತಿ ನೀಡಿದ್ದಾರೆ. ತದ ನಂತರ ಗುರುಬಸವರಾಜ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ಒಟ್ಟು 70,740 ರೂ. ಹಣ ಆನ್‌ಲೈನ್ ಮೂಲಕ ವರ್ಗಾವಣೆಗೊಂಡಿದೆ ಎಂದು ದೂರು ನೀಡಲಾಗಿದೆ.


**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ.
ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಹೊಸ ಮನೆ ಬಾಡಿಗೆಗೆ/ಲೀಸ್‌ಗಿದೆ**
ಬನಶಂಕರಿ ಹೊಸ ಬಡಾವಣೆಯಲ್ಲಿ ಕೊಳಚೆ ನಿರ್ಮೂಲನ ಮಂಡಳಿ ಆಫೀಸ್ ಹತ್ತಿರ ಡೋರ್ ನಂ.192/4-27 ಉತ್ತರ ಮುಖವಾಗಿರುವ 2 ಬೆಡ್ ರೂಂ, ಬೋರ್ ವೆಲ್ ನೀರಿನ ಸೌಕರ್ಯವಿರುವ ಸುಸಜ್ಜಿತವಾದ ಹೊಸ ಮನೆ ಬಾಡಿಗೆ/ಲೀಸ್‌ಗೆ ಇದೆ. ಸಂಪರ್ಕಿಸಿ (ಸಸ್ಯಹಾರಿಗಳಿಗೆ ಮಾತ್ರ)
89719 97005

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, 2 ಮತ್ತು 3 ಬೆಡ್ ರೂಂ, ಪೂಜಾ ರೂಂ ಇರುವ ಏಳೂವರೆ ಚದುರವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ. ಸಂಪರ್ಕಿಸಿ.
87622-21972

**ಹೊಸ ಕಟ್ಟಡ ಮಾರಾಟಕ್ಕಿದೆ**
ನಿಜಲಿಂಗಪ್ಪ ಬಡಾವಣೆ, ಆಂಜನೇಯ ದೇವಸ್ಥಾನ ಹತ್ತಿರ, ಮೂಲೆ ನಿವೇಶನದಲ್ಲಿ ಹೊಸದಾಗಿ ಕಟ್ಟಿರುವ 3 ಮನೆ ಮತ್ತು 2 ಅಂಗಡಿಗಳುಳ್ಳ 3 ಅಂತಸ್ತಿನ ಕಟ್ಟಡ ಮಾರಾಟಕ್ಕಿದೆ. ಸಂಪರ್ಕಿಸಿ
90088 78676

**ಸೈಟುಗಳು ಮಾರಾಟಕ್ಕಿವೆ**
30×50 East KHB ಯಲ್ಲಿ Rate-1650/-, 30×50 North ಡಾಲರ್ಸ್ ಕಾಲೋನಿ ಹತ್ತಿರ ಮಿಟ್ಲಕಟ್ಟೆ ರೋಡಿಗೆ ಹತ್ತಿರ Rate- 2500/-, 30×63 Corner ಡಾಲರ್ಸ್ ಕಾಲೋನಿಯಲ್ಲಿ Rate-2900/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
40 ಅಡಿ ರಸ್ತೆಗೆ ಹೊಂದಿಕೊಂಡಿರುವ ಬನಶಂಕರಿ ಬಡಾವಣೆಯಲ್ಲಿ 30×40 ಪಶ್ಚಿಮ, ಶಿವ ಪಾರ್ವತಿ ಬಡಾವಣೆಯಲ್ಲಿ 30×50 ಪಶ್ಚಿಮ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30×50 ಉತ್ತರ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಬಾಡಿಗೆಗೆ ಇದೆ**
ರಂಗನಾಥ್ ಬಡಾವಣೆಯ 8ನೇ ಕ್ರಾಸ್‌ನ ಗಾರ್ಡನ್ ಗೇಟ್ ರೆಸ್ಟೋರೆಂಟ್ ಹಿಂದುಗಡೆ 1ನೇ ಮಹಡಿಯಲ್ಲಿ ಎರಡು ಬೆಡ್ ರೂಂ ಇರುವ ಮನೆ ಬಾಡಿಗೆಗಿದೆ. ಸಂಪರ್ಕಿಸಿ :
88803 18884, 97434 37766, 99868 97209

**ಸೈಟುಗಳು ಮಾರಾಟಕ್ಕಿವೆ**
ಹರಿಹರ ನಗರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ. ರೂ. 999sq.ft ಹಾಗೂ ಸುಲಭ ಕಂತಿನಲ್ಲಿ ಲಭ್ಯ. 30×40, 30x50
94829 48699, 94814 58699
86603 11021 ,93431 10009

**ಮನೆಗಳು ಬಾಡಿಗೆಗೆ/ಲೀಸ್‌ಗೆ ಇದೆ**
ಸಿಂಗಲ್ ಬೆಡ್ ರೂಂ, ಡಬಲ್ ಬೆಡ್ ರೂಂ, ಮೂರು ಬೆಡ್ ರೂಂ ವಿದ್ಯಾನಗರ, ಆಂಜನೇಯ ಬಡಾವಣೆ, ವಿನಾಯಕ ಬಡಾವಣೆಯಲ್ಲಿ ಅರ್ಧ ಪರ್ಸೆಂಟ್ ಕಮೀಷನ್ ಆಧಾರದ ಮೇಲೆ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**Wanted**
Computer Trainer
(Ladies Only)
Basic, DTP, Tally
Qual : PU/Dip/Degree
Call : 74062 78270

**ತಕ್ಷಣ ಬೇಕಾಗಿದ್ದಾರೆ**
ಆಯಾ ಕೆಲಸ ಮಾಡಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ.
ಸಂಪರ್ಕಿಸಿ
91130 53483

**ಬಾಡಿಗೆಗೆ ಇದೆ**
ಎರಡು ಬೆಡ್‌ರೂಮ್‌ನ (ಪೂರ್ವ) ಮೊದಲ ಮಹಡಿ ಮನೆ ಖಾಲಿ ಇದೆ.
ವಿಳಾಸ:- ನಂ.3742, 14ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 98447 36220

**ಪಾಸ್‌ಪೋರ್ಟ್ ಕಳೆದಿದೆ**
ದಾವಣಗೆರೆ ಬಾಷಾನಗರ 17ನೇ ಕ್ರಾಸ್ # 3/05ರ ವಾಸಿ ಮುಜೀಬ್ ಉರ್ ರೆಹಮಾನ್ ಬಿನ್ ಉಬೇದುಲ್ಲಾ ಈ ಹೆಸರಿನ ಪಾಸ್ ಪೋರ್ಟ್ (M7626600 Dated 26.3.2015) ದಿ.10.12.2021 ರಂದು ದಾವಣಗೆರೆ ಕೆ.ಟಿ.ಜೆ ನಗರದಲ್ಲಿ ಜೆರಾಕ್ಸ್ ಮಾಡಿಸಲು ಹೋದಾಗ ಕಳೆದಿದ್ದು, ಯಾರಿಗಾದರೂ ಸಿಕ್ಕಲ್ಲಿ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಲು ಕೋರಿದೆ.
83106 92910, 99801 34745

**ಬೇಕಾಗಿದ್ದಾರೆ**
ಆಯಾಗಳು, GNM/ ANM ನರ್ಸ್‌ಗಳು, ವಾರ್ಡ್ ಬಾಯ್ ಬೇಕಾಗಿದ್ದಾರೆ.
ಸಂಪರ್ಕಿಸಿ
ಮೊ. 89708 65248

**ಮಳಿಗೆ ಬಾಡಿಗೆಗೆ ಇದೆ**
ದಾವಣಗೆರೆ ಕೆ.ಆರ್.ರಸ್ತೆಯಲ್ಲಿ ನ್ಯೂ ನಂದಿ ಲಾಡ್ಜ್ ಕಾಂಪ್ಲೆಕ್ಸ್‌ನಲ್ಲಿರುವ 13x30 ಅಡಿ ಮಳಿಗೆ ಬಾಡಿಗೆಗೆ ಇದೆ.
ಸಂಪರ್ಕಿಸಿ
7406740635
94496 09805

**ಹೊಸಮನೆ ಮಾರಾಟಕ್ಕಿದೆ**
ಜೆ.ಎಚ್. ಪಟೇಲ್ ಬಡಾವಣೆಯಲ್ಲಿ ಗ್ರೀನ್ ಬಿಲ್ಡ್ ಇಂಜಿನಿಯರ್ಸ್ ಅಂಡ್ ಡೆವಲಪರ್ಸ್ ನಿರ್ಮಿಸಿರುವ ಉತ್ತರ ದಿಕ್ಕಿನ 20×30 ಅಳತೆಯ ಹೊಸಮನೆ ಮಾರಾಟಕ್ಕಿದೆ. ವಾಸ್ತು ಪ್ರಕಾರ ಗ್ರೌಂಡ್ ಮತ್ತು ಫಸ್ಟ್ ಫ್ಲೋರ್ ಪ್ರತ್ಯೇಕ ಇರುವ, ಫರ್ನಿಷ್ಡ್ ಎರಡು ಬೆಡ್ ರೂಮ್ ಮತ್ತು ಸ್ವಂತ ಬೋರ್ ವೆಲ್ ಹೊಂದಿರುವ ಮನೆ. ಸಂಪರ್ಕಿಸಿ
63601 09142

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**ಶಿಕ್ಷಕಿಯರು ಬೇಕಾಗಿದ್ದಾರೆ**
BA, B.Com, B.Sc ಹಾಗೂ PUC, NTC ತರಬೇತಿ ಹೊಂದಿದ ಶಿಕ್ಷಕಿಯರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, ದಾವಣಗೆರೆ. ಸಂಪರ್ಕಿಸಿ :
99640 17729

**ಮನೆ ಮಾರಾಟಕ್ಕಿದೆ**
ಜಯನಗರ ಎ ಬ್ಲಾಕ್‌ನಲ್ಲಿರುವ ಕಾಳಿದಾಸ ಸರ್ಕಲ್ ಹಿಂಭಾಗ ಕಾರ್ನರ್ ಪಶ್ಚಿಮ ದಿಕ್ಕಿನಲ್ಲಿರುವ (30×40) ಎರಡು ಅಂತಸ್ತಿನ ಸುಸಜ್ಜಿತ ವ್ಯವಸ್ಥೆಯ ಹೊಸ ಮನೆ ಮಾರುವುದಿದೆ. ಡೋರ್ ನಂ.790/6/176
ಸಂಪರ್ಕಿಸಿ: 94827 64316

**ಮಾರಾಟಕ್ಕಿವೆ**
ಹೊಸದಾಗಿ ಮಾಡಿಸಿದ ಪ್ಲೈವುಡ್ ಗ್ಲಾಸ್ ಸೇಲ್ಸ್‌ನ ರ್‍ಯಾಕ್‌ಗಳು ಮಾರಾಟಕ್ಕಿವೆ.
ಆಸಕ್ತರು ಸಂಪರ್ಕಿಸಿರಿ.
97434 47076

**ಹುಡುಗರು ಬೇಕಾಗಿದ್ದಾರೆ**
ಬ್ರಾಂಡೆಡ್ ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
98867 57688

**PAINTING & POLISH WORK (TURNKEY)**
Contact
Ph : 98452 32516

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**ಮನೆ ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ನಗರ ಉತ್ತರ ದಿಕ್ಕಿನ 2 ಬೆಡ್ ರೂಮ್, ಬೋರ್‌ವೆಲ್ ನೀರು ವ್ಯವಸ್ಥೆ ಇರುವ 30x40ರ ಮನೆ, 20x30 ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
83173 63203, 94482 33389

**ಕಮರ್ಷಿಯಲ್ ಹಾಲ್ ಬಾಡಿಗೆ ಇದೆ**
ನಿಜಲಿಂಗಪ್ಪ ಬಡಾವಣೆ ಮುಖ್ಯರಸ್ತೆ, 17×60 (1020 Sqft) ಅಟ್ಯಾಚ್ ಬಾತ್ ರೂಂ, ಗ್ರೌಂಡ್‌ಫ್ಲೋರ್ ಆಫೀಸ್, ಬ್ಯಾಂಕ್, ಕ್ಲಿನಿಕ್, ಬ್ಯೂಟಿ ಪಾರ್ಲರ್, ಡಾನ್ಸ್ ಕ್ಲಾಸ್, ಹೋಟೆಲ್‌ಗೆ
ಫೋ. : 94482 33844
ಬಿ. ಲಿಂಗರಾಜ್, ನೋಟರಿ ಪಬ್ಲಿಕ್

**ಆರೋಗ್ಯವೇ ಭಾಗ್ಯ**
ಉತ್ತಮ ಆರೋಗ್ಯ ಪಡೆದುಕೊಂಡು ಅತ್ಯುತ್ತಮ ಸಂಪಾದನೆ ಮಾಡಲು ಸುವರ್ಣಾವಕಾಶ. ತಿಂಗಳಿಗೆ 25,000 ರಿಂದ 50,000 ರವರೆಗೆ ಹಣ ಗಳಿಸುವ ಸುವರ್ಣಾವಕಾಶ
ಸಂಪರ್ಕಿಸಿ: Dr. Ekantha
85499 29151, 80955 70649

**ಸಂಪರ್ಕಿಸಿರಿ**
ದಾವಣಗೆರೆ ಸುತ್ತಮುತ್ತ ವ್ಯವಸಾಯ ಮಾಡಲು ಜಮೀನು ನೀಡುವವರು ಸಂಪರ್ಕಿಸಿ.
ಫೋ. : 88844 06134

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ**
ಆಫೀಸ್‌ನಲ್ಲಿ ಕೆಲಸ ಮಾಡಲು ಮಹಿಳಾ ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ.
ಸಂಪರ್ಕಿಸಿ
90354 00572

**Required**
PRO's for reputed PU Science college in Davangere
89702 25551

**ಬಾಡಿಗೆಗೆ/ ಲೀಸ್‌ಗೆ**
2 ಬೆಡ್‌ರೂಂ, ಅಟ್ಯಾಚ್ ಬಾತ್‌ರೂಂವುಳ್ಳ 4 ಮನೆಗಳು ಕುಂದುವಾಡ ಕೆರೆ ಹತ್ತಿರ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಲಭ್ಯವಿರುತ್ತವೆ.
(ಸಂಗಮ್ ಅಪಾರ್ಟ್‌ಮೆಂಟ್‌ನಲ್ಲಿ)
96388 17967
73380 43912

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**WANTED MBBS Doctors**
(General Physician, Pediatrician, Gynecologist or Dermatologist) for Health Care Clinic Behind Qadir Medicals, Narasarajpet, DVG
79753 30724, 74830 10115

**ಶಾಲಾ ಬಸ್ ಮಾರಾಟಕ್ಕಿದೆ**
TATA Model-2013
ಸಂಪರ್ಕಿಸಿ:
94497 02778
94819 09493
ಆಯಾ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ

**TO-LET**
1) Office Space for rent, Front Room, Suitable for Auditor, Computre Repair, Insurance Agent etc. 2) out house 1 BHK Ground floor, 1st floor. Near Ram & Co Circle 5th Main, P.J. Exten
94816 72545

**WANTED**
Male Candidates required for Office Administration & Accountant. Qualification- B.Com only Experience- 3-5 Years (Tally & GST Knowledge Compalsory)
Salary- 15000 per month
81477 89522

**ಬೇಕಾಗಿದ್ದಾರೆ**
ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಅನುಭವವಿರುವವರು ಬೇಕಾಗಿದ್ದಾರೆ. ಆಸಕ್ತಿ ಇರುವವರು ಸಂಪರ್ಕಿಸಿರಿ.
70192 49897

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಆತ್ಮಶಕ್ತಿ**
(ಮನಸ್ಸಿನ ಕಣ್ಣಿಗೆ ಗೋಚರಿಸುವ ಶಕ್ತಿ)
ಯಂತ್ರ, ಮಂತ್ರ, ತಂತ್ರ, ಸ್ತಂಭನ, ವಶೀಕರಣ, ಷಟ್ಕರ್ಮ ಒಟ್ಟು 15 ತರಹ ವಿದ್ಯೆಯ ತರಬೇತಿ ಹಾಗೂ ಪರಿಹಾರ ಇರುವುದು, ನಿಮ್ಮ ಸಮಸ್ಯೆಗೆ ಕರೆಯಲ್ಲಿ ಉಚಿತ ಸಲಹೆ ನೀಡುತ್ತಾರೆ. ಚಾನಲ್‌ನಲ್ಲಿ ಸೇವೆ ಸಲ್ಲಿಸಿ ಈಗ ದಾವಣಗೆರೆಯಲ್ಲಿರುತ್ತಾರೆ.
ಕರೆ ಮಾಡಿ : 97409 55345

**PUC ಮಾರ್ಕ್ಸ್‌ಕಾರ್ಡ್ ಕಳೆದಿದೆ**
ಶ್ವೇತಾ.ಈ S/o ಈಶ್ವರಪ್ಪ ಎಂಬ ಹೆಸರಿನಲ್ಲಿರುವ 2018-19ನೇ ಸಾಲಿನ ದ್ವಿತೀಯ ಪಿಯುಸಿ ಅಂಕಪಟ್ಟಿಯು ದಿ.6.12.2021ರ ಸೋಮವಾರ ಮಧ್ಯಾಹ್ನ 2.30ರ ಸಮಯದಲ್ಲಿ ದಾವಣಗೆರೆ ಗಡಿಯಾರ ಕಂಬದ ಹತ್ತಿರ ಬಿದ್ದು ಕಳೆದು ಹೋಗಿದ್ದು, ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ದೂರವಾಣಿಗೆ ತಿಳಿಸಬೇಕಾಗಿ ವಿನಂತಿ.
ಶ್ವೇತಾ.ಈ. ಮೊ.91483 20614

**CHANGE OF NAME**
I Manjunath Sreenivasa Setty (new name), previously called Srinivasa Setty Manjunath (old name), S/o Yencharla Sreenivasa Setty, R/o Door No. 2043/20, "Nalivu", 3rd Cross, C' Main, S S Layout, B' Block, Davangere - 577002, Davangere District have changed my name as Manjunath Sreenivasa Setty vide affidavit dated 04-12-2021 sworn before Notary B. Lingaraj, Davangere. Henceforth all my transactions & dealings will be in my new name Manjunath Sreenivasa Setty.

**ಬೇಕಾಗಿದ್ದಾರೆ**
ವೆನ್‌ಸನ್ಸ್ ಕಾಫಿ ಕಂಪನಿಯಲ್ಲಿ ಪ್ಯಾಕಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
ಫೋ. : 99864 54806

**Commercial Building For Rent**
Three Floor Commercial Building Situated at K.R Road (Near Shanthi Talkies) suitable for Nursing Homes/ Hospitals is availabele for rent.
Contact : 98800 64464

**ಭಟ್ಟರು ಬೇಕಾಗಿದ್ದಾರೆ**
ಇಡ್ಲಿ, ವಡಾ, ಮೆಣಸಿನಕಾಯಿ, ಮಂಗಳೂರು ಬಜ್ಜಿ, ಈರುಳ್ಳಿ ಬಜ್ಜಿ, ಪೂರಿ ಮಾಡಲು ನುರಿತ ಭಟ್ಟರು ಬೇಕಾಗಿದ್ದಾರೆ.
ರೇವಣಸಿದ್ದಪ್ಪ: 63611 78383
ವೆಂಕಟೇಶ್: 95913 20034

**ಮನೆ ಬಾಡಿಗೆಗೆ / ಲೀಸ್‌ಗಿದೆ.**
1st ಫ್ಲೋರ್‌ನಲ್ಲಿ 2 BHK ಉತ್ತರ ದಿಕ್ಕಿನ ಮುಂಬಾಗಿಲುವುಳ್ಳ ಹಾಗೂ ಬೋರ್-ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಮನೆ ಬಾಡಿಗೆಗಿದೆ. ಮನೆ # 651, ಶ್ರೀ ಕಟೀಲು, ೬ ನೇ ಕ್ರಾಸ್, ಶ್ರೀನಿವಾಸ ನಗರ, ಹದಡಿ ರಸ್ತೆ, ದಾವಣಗೆರೆ.
ಮೊ.70194 27951, 93410 14488

**Immediate Recruit**
Female telecaller required to speak in all languages.
Salary: 8000 + incentive.
Call for walk in
90089 85112

# 28 ರಂದು ಪಾಲಿಕೆಯಿಂದ ಕನ್ನಡ ರಾಜ್ಯೋತ್ಸವ

ದಾವಣಗೆರೆ, ಡಿ.24- ಮಹಾನಗರ ಪಾಲಿಕೆ, ಕನ್ನಡಪರ ಸಂಘಟನೆಗಳು ಹಾಗೂ ಪತ್ರಕರ್ತರ ಸಹಯೋಗದಲ್ಲಿ ಇದೇ ದಿನಾಂಕ 28 ರ ಮಂಗಳ ವಾರ ಕನ್ನಡ ರಾಜ್ಯೋತ್ಸವವನ್ನು ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ಮೇಯರ್ ಎಸ್. ಟಿ. ವೀರೇಶ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 9 ಗಂಟೆಗೆ ಪಾಲಿಕೆ ಆವರಣದಿಂದ ತಾಯಿ ಭುವನೇಶ್ವರಿ ಮೆರವಣಿಗೆಗೆ ಬಾಪೂಜಿ ಪ್ರೌಢ ಶಾಲೆಯ ನಿರ್ದೇಶಕ ಕೆ. ಇಮಾಂ ಅವರು ಚಾಲನೆ ನೀಡಲಿದ್ದಾರೆ. ವಿವಿಧ ಜಾನಪದ ಕಲಾ ತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ ಎಂದರು.

ಪ್ರತಿ ಬಾರಿ ಮೂರು ದಿನಗಳ ಕಾಲ ರಾಜ್ಯೋತ್ಸವ ಆಚರಿಸಲಾಗುತ್ತಿತ್ತು. ಕೋವಿಡ್ ಹಿನ್ನೆಲೆಯಲ್ಲಿ ಈ ಬಾರಿ ಒಂದು ದಿನಕ್ಕೆ ಸೀಮಿತಗೊಳಿಸಲಾಗಿದೆ. ಕಾರ್ಯಕ್ರಮ ಯಶಸ್ವಿಗಾಗಿ ಈಗಾಗಲೇ ಸಮಿತಿಗಳನ್ನು ರಚಿಸಲಾಗಿದ್ದು, ಉಪ ಮಹಾಪೌರರಾದ ಶ್ರೀಮತಿ ಶಿಲ್ಪ ಜಯಪ್ರಕಾಶ್ ನೇತೃತ್ವದಲ್ಲಿ ಮಹಿಳಾ ಸದಸ್ಯರುಗಳಿಗೆ ಹಾಗೂ ಪಾಲಿಕೆ ಕಚೇರಿಯ ಮಹಿಳಾ ನೌಕರರಿಗೆ ಕ್ರೀಡೆಗಳನ್ನು ಆಯೋಜಿಸಲಾಗಿದೆ.

ನಾಳೆ ದಿನಾಂಕ 25 ರ ಶನಿವಾರ ಕ್ರೀಡಾ ಸಮಿತಿ ವತಿಯಿಂದ ಸ್ಥಾಯಿ ಸಮಿತಿ ಅಧ್ಯಕ್ಷೆ ರೇಣುಕಾ ಶ್ರೀನಿವಾಸ್ ಹಾಗೂ ಸದಸ್ಯ ಕೆ.ಎಂ. ವೀರೇಶ್ ನೇತೃತ್ವದಲ್ಲಿ ವಿವಿಧ ಕ್ರೀಡೆಗಳನ್ನು ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ದಿನಾಂಕ 28 ರ ಸಂಜೆ ಮಹಾನಗರ ಪಾಲಿಕೆ ಆವರಣದಲ್ಲಿ ಆಯೋಜಿಸಲಾಗಿರುವ ರಾಜ್ಯೋತ್ಸವದ ವೇದಿಕೆ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಎಸ್.ಎ. ರವೀಂದ್ರನಾಥ್, ಡಾ. ಶಾಮನೂರು ಶಿವಶಂಕರಪ್ಪ, ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಮಹೇಶ್ ಜೋಷಿ, ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಸಭಾ ಕಾರ್ಯಕ್ರಮದ ನಂತರ ಸ್ಥಳೀಯ ಕಲಾವಿದರಿಂದ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಮೇಯರ್ ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಉಪ ಮಹಾಪೌರರಾದ ಶಿಲ್ಪ ಜಯಪ್ರಕಾಶ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಎಲ್.ಡಿ. ಗೋಣೆಪ್ಪ, ಗೀತಾ ದಿಳ್ಳೆಪ್ಪ, ಗೌರಮ್ಮ, ಸದಸ್ಯರಾದ ಕೆ.ಎಂ. ವೀರೇಶ್, ಕೆ. ಚಮನ್ ಸಾಬ್, ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಕನ್ನಡಪರ ಸಂಘಟನೆಗಳ ಪದಾಧಿಕಾ ರಿಗಳಾದ ಕೆ.ಜಿ. ಶಿವಕುಮಾರ್, ಟಿ. ಶಿವ ಕುಮಾರ್, ನಾಗೇಂದ್ರ ಬಂಡೀಕರ್, ಸೋಮ ಶೇಖರ್, ಜಮ್ನಹಳ್ಳಿ ನಾಗರಾಜ್, ಶಿವಪ್ರಕಾಶ್, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ವೀರಪ್ಪ ಎಂ. ಬಾವಿ ಮತ್ತಿತರರಿದ್ದರು.

## ಡಾ. ಎಂ.ಜಿ. ಈಶ್ವರಪ್ಪ ಅವರ 'ನಿಜದಿಂ ಕುರಿತೋದದೆಯುಂ' ಪುಸ್ತಕ ಬಿಡುಗಡೆ



ಜಾನಪದ ವಿದ್ವಾಂಸರೂ, ಶಿಕ್ಷಣ ತಜ್ಞರೂ, ಹಿರಿಯ ಸಾಹಿತಿಗಳೂ ಆದ ಡಾ. ಎಂ.ಜಿ. ಈಶ್ವರಪ್ಪ ಅವರ 'ನಿಜದಿಂ ಕುರಿತೋದದೆಯುಂ' (ಗ್ರಾಮೀಣ ಸಂಸ್ಕೃತಿ ಸಂದರ್ಭ ಕೋಶ) ಪುಸ್ತಕ ಬಿಡುಗಡೆ ಸಮಾರಂಭವು ಕುವೆಂಪು ಕನ್ನಡ ಭವನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಹಿರಿಯ ಸಾಹಿತಿಗಳೂ ಆದ ಸಾಂಸ್ಕೃತಿಕ ಚಿಂತಕ ಪ್ರೊ. ಬರಗೂರು ರಾಮಚಂದ್ರಪ್ಪ ಪುಸ್ತಕ ಬಿಡುಗಡೆ ಮಾಡುವರು. ಕನ್ನಡ ಪ್ರಾಧ್ಯಾಪಕ ಡಾ. ದಾದಾಪೀರ್ ನವಿಲೇಹಾಳ್, ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಅವರು ಪುಸ್ತಕ ಕುರಿತು ಮಾತನಾಡಲಿದ್ದಾರೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಪ್ರತಿಮಾ ಸಭಾ ಇವರ ಜಂಟಿ ಆಶ್ರಯದಲ್ಲಿ ಏರ್ಪಾಡಾಗಿರುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ವಹಿಸಲಿದ್ದಾರೆ.

## ಕೊಕ್ಕನೂರಿನಲ್ಲಿ ಇಂದು ಕಾರ್ತಿಕೋತ್ಸವ



ಮಲೇಬೆನ್ನೂರು ಸಮೀಪದ ಕೊಕ್ಕನೂರು ಗ್ರಾಮದ ಆರಾಧ್ಯ ದೈವ ಶ್ರೀ ಆಂಜನೇಯ ಸ್ವಾಮಿಯ ಕಡೇ ಕಾರ್ತಿಕೋತ್ಸವ ಮತ್ತು ಅಶ್ವೋತ್ಸವ ಇಂದು ಸಂಜೆ ಜರುಗಲಿದೆ.

## ಬನಶಂಕರಿ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ



ಹಳೇ ಬೇತೂರು ರಸ್ತೆ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಇಂದು ಕಡೇ ಕಾರ್ತಿಕ ಮಹೋತ್ಸವದ ಅಂಗವಾಗಿ ವಿಶೇಷ ಪೂಜೆ ಹಾಗೂ ಕುಂಕುಮ ಅಲಂಕಾರವನ್ನು ಮಾಡಲಾಗಿದೆ.

# ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಅಭಿವೃದ್ಧಿಯ ಕೀರ್ತಿ ಮಠಗಳಿಗೆ ಸಲ್ಲುತ್ತದೆ




**ಹರಪನಹಳ್ಳಿಯ ಧರ್ಮ ಚಿಂತನಾ ಸಭೆಯಲ್ಲಿ ಅರಸಿಕೇರಿ ಕೋಲಶಾಂತೇಶ್ವರ ಶ್ರೀ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ**

ಹರಪನಹಳ್ಳಿ, ಡಿ.24- ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕವಾಗಿ ಅಭಿವೃದ್ಧಿಗೊಳಿಸಿದ ಕೀರ್ತಿ ಮಠ, ಮಾನ್ಯಗಳಿಗೆ ಸಲ್ಲುತ್ತದೆ ಎಂದು ಅರಸಿಕೇರಿ ಕೋಲಶಾಂತೇಶ್ವರ ಶ್ರೀ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಪಟ್ಟಣದ ಕಾಶಿ ಸಂಗಮೇಶ್ವರ ಬಡಾವಣೆಯಲ್ಲಿರುವ ಗವಿಸಿದ್ಧೇಶ್ವರ ಶಾಖಾಮಠ (ಕಾಶಿಮಠ) ದಲ್ಲಿ ಗುರುವಾರ ನಿವೃತ್ತ ಶಿಕ್ಷಕ ಎಂ.ರುದ್ರಪ್ಪನವರ 'ಪಯಣಿಗ ಪಥ' ಪುಸ್ತಕ ಬಿಡುಗಡೆ ಹಾಗೂ ಧರ್ಮಚಿಂತನಾ ಸಭೆಯ ಸಾನಿಧ್ಯವಹಿಸಿ ಮಾತನಾಡಿದರು.

ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ, ಸಂಸ್ಕಾರವನ್ನು ಕಲಿಸಿದಾಗ ಮಾತ್ರ ಅವರು ಸುಸಂಸ್ಕೃತರಾಗಲು ಸಾಧ್ಯ. ಹರಪನಹಳ್ಳಿ ಗವಿಮಠವು ಅಭಿವೃದ್ಧಿಯತ್ತ ಸಾಗುತ್ತಿರುವುದಕ್ಕೆ ಶ್ರೀಗಳ ಶ್ರಮ ಕಾರಣ ಎಂದರು.

ಪಿಎಸ್ಐ ಸಿ.ಪ್ರಕಾಶ್ ಮಾತನಾಡಿ, ಜಾತ್ಯತೀತ ರಾಷ್ಟ್ರವಾದ ಭಾರತದಲ್ಲಿ ಅನೇಕ ಧರ್ಮಗಳು ಇದ್ದರೂ, ಎಲ್ಲಾ ಧರ್ಮಗಳ ಸಾರ ಒಂದೇ ಆಗಿದೆ. ಎಲ್ಲ ಧರ್ಮದಲ್ಲಿ ಮಾನವೀಯ ಮೌಲ್ಯಗಳು ಇವೆ. ಆದರೆ ಇತ್ತೀಚಿಗೆ ಮಾನವಿಯ ಮೌಲ್ಯಗಳು ಕಣ್ಮರೆಯಾಗುತ್ತಿವೆ. ಎಲ್ಲರೂ ಧರ್ಮದಲ್ಲಿ ಹೇಳಿದ ಹಾಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಕಾಯಕ, ದಾನ, ದಾಸೋಹ ಶಿಕ್ಷಣಕ್ಕೆ ಆಧ್ಯತೆ ನೀಡಬೇಕು ಎಂದರು.

ಕೊಟ್ಟೂರು ದೇವರು 'ಪಯಣಿಗನ ಪಥ' ಕುರಿತು ಮಾತನಾಡಿದರು. ಈ ವೇಳೆ ಗ್ರಂಥ ರಚನೆಕಾರರಾದ ಎಂ.ರುದ್ರಪ್ಪನವರನ್ನು ಶ್ರೀಮಠದಿಂದ ಸನ್ಮಾನಿಸಿ ಗೌರವಿಸಲಾಯಿತು.

ಗವಿಸಿದ್ಧೇಶ್ವರ ಶಾಖಾ ಮಠದ ಶ್ರೀ ಹಿರಿಯ ಶಾಂತವೀರ ಮಹಾಸ್ವಾಮೀ ಅಧ್ಯಕ್ಷತೆ ವಹಿಸಿದ್ದರು. ಕೆಪಿಸಿಸಿ ಮಹಿಳಾ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್, ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತಕರ್, ಪುರಸಭೆ ಸದಸ್ಯ ಹರಾಳು ಅಶೋಕ, ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಸಮಾಜ ಸೇವಕಿ ಲಲಿತಮ್ಮ, ಎಡಿಬಿ ಕಾಲೇಜು ಪ್ರಾಚಾರ್ಯ ಮಲ್ಲಿಕಾರ್ಜುನ, ಅಕ್ಕನ ಬಳಗದ ತೆಲಿಗಿ ಶಾಂತಮ್ಮ, ಪ್ರೇಮವ್ವ, ರಮೇಶ, ಶಿವಕುಮಾರ ಬಾಗಳಿ, ಆರುಂಡಿ ನಾಗರಾಜ, ಸುವರ್ಣ ನಾಗರಾಜ, ಶಿಕ್ಷಕ ಎ.ಜಿ. ಚನ್ನಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮತಾಂತರ ನಿಷೇಧ ಕಾಯ್ದೆಗೆ ಎಸ್‌ಡಿಪಿಐ ವಿರೋಧ




ದಾವಣಗೆರೆ, ಡಿ.24- ಮತಾಂತರ ನಿಷೇಧ ಕಾಯ್ದೆ ವಿರೋಧಿಸಿ ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಸಂಘಟನೆಯು ನಗರದಲ್ಲಿ ಇಂದು ಪ್ರತಿಭಟನೆ ನಡೆಸಿತು.

ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ಸಂಘಟನೆಯ ಕಾರ್ಯಕರ್ತರು, ಸರ್ಕಾರ ಮತಾಂತರ ನಿಷೇಧ ಕಾಯ್ದೆ ಜಾರಿಗೆ ಮುಂದಾಗಿರುವುದು ಇಲ್ಲಿರುವ ಅಲ್ಪಸಂಖ್ಯಾತ ಸಮುದಾಯಗಳನ್ನು ಹತ್ತಿಕ್ಕುವುದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ಈ ನಿರ್ಧಾರಕ್ಕೆ ವಿರೋಧ ಪಕ್ಷಗಳು ಸುಮ್ಮನಾಗಿವೆ. ರಾಜ್ಯ ಸರ್ಕಾರವು ಜಾರಿಗೊಳಿಸಲು ಉದ್ದೇಶಿಸಿರುವ ಮತಾಂತರ ನಿಷೇಧ ಕಾಯ್ದೆಯು ಸಂವಿಧಾನದ ಆರ್ಟಿಕಲ್ 25 ಪ್ರತಿಪಾದಿಸುವ, ಭಾರತೀಯ ಜನತೆಯ ಧಾರ್ಮಿಕ ಹಕ್ಕು ಮತ್ತು ಸ್ವಾತಂತ್ರ್ಯದ ಸ್ಪಷ್ಟ ಉಲ್ಲಂಘನೆಯಾಗಿದೆ ಹಾಗೂ ಪ್ರತಿಯೊಬ್ಬ ಭಾರತೀಯನ ಧಾರ್ಮಿಕ ಸ್ವಾತಂತ್ರ್ಯವನ್ನು ಅತಿಕ್ರಮಿಸುವ ಹುನ್ನಾರವಾಗಿದೆ ಎಂದು ಸಂಘಟನೆಯ ಮುಖಂಡ ಅಪ್ಸರ್ ಕೊಡ್ಲಿಪೇಟೆ ಆರೋಪಿಸಿದರು.

ಸದರಿ ಕಾಯ್ದೆಯು ಅಪ್ರಾಪ್ತ, ಅಸ್ವಸ್ಥ ಚಿತ್ತ, ಮಹಿಳೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರನ್ನು ಮತಾಂತರ ಮಾಡಿದರೆ ಶಿಕ್ಷೆಗೆ ಗುರಿಪಡಿಸಲಾಗುವುದು ಎನ್ನುವ ಮೂಲಕ ದಲಿತ ಸಮುದಾಯವನ್ನು ಮಾನಸಿಕ ಅಸ್ವಸ್ಥರು ಎನ್ನುವ ಮೂಲಕ ತುಂಬಾ ಅವಮಾನಕರವಾಗಿ ಬಿಂಬಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಆರ್. ಭಾಸ್ಕರ್ ಪ್ರಸಾದ್ ಮಾತನಾಡಿ, ಮತಾಂತರ ನಿಷೇಧ ಕಾಯ್ದೆ ಎಂಬ ಈ ಸರ್ಕಾರಿ ಪ್ರಾಯೋಜಿತ ಭಯೋತ್ಪಾದಕ ಮಸೂದೆಗೆ ಅನುಮತಿ ನೀಡಬಾರದು ಎಂದು ರಾಜ್ಯಪಾಲರಿಗೆ ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಕ್ರಿಶ್ಚಿಯನ್ ಫೋರಂ ಫಾರ್ ಹ್ಯೂಮನ್ ರೈಟ್ ರಾಜ್ಯಾಧ್ಯಕ್ಷ ಬಿ. ರಾಜಶೇಖರ್, ಸಂಘಟನೆಯ ಜಿಲ್ಲಾಧ್ಯಕ್ಷ ಇಸ್ಮಾಯಿಲ್ ಜಬೀವುಲ್ಲಾ, ಜಾಸ್ಮಿನ್ ಬಾನು ಸೇರಿದಂತೆ ಇತರರು ಭಾಗವಹಿಸಿದ್ದರು.

## ಶಾಮನೂರಿನಲ್ಲಿ ಇಂದು ಮಾಲಸಾಂಬ ಕಾರ್ತಿಕೋತ್ಸವ

ಶಾಮನೂರಿನ ಶ್ರೀ ಮಾಲಸಾಂಬ ಗಂಗಮಾಳಮ್ಮ ದೇವಸ್ಥಾನದಲ್ಲಿ ಇಂದು ರಾತ್ರಿ 8.30 ಕ್ಕೆ ಕಾರ್ತಿಕೋತ್ಸವ ಏರ್ಪಡಿಸಲಾಗಿದೆ.

# ಕಾಂಗ್ರೆಸ್, ಬಿಜೆಪಿ ಅಭಿವೃದ್ಧಿ ಹೆಸರಿನಲ್ಲಿ ಮತ ಪಡೆಯಲು ಸಾಧ್ಯವಿಲ್ಲ



**ಮಾಜಿ ಶಾಸಕ ಶಿವಶಂಕರ್**

ಹರಿಹರ, ಡಿ. 24 - ಕಾಂಗ್ರೆಸ್ ಪಕ್ಷ ರಾಹುಲ್ ಗಾಂಧಿಯವರ ಮತ್ತು ಬಿಜೆಪಿ ಪಕ್ಷದವರು ನರೇಂದ್ರ ಮೋದಿಯವರ ಹೆಸರು ಹೇಳಿಕೊಂಡು ಮತವನ್ನು ಕೇಳುತ್ತಾರೆ. ಇವರಿಗೆ ಅಭಿವೃದ್ಧಿ ಹೆಸರನ್ನು ಹೇಳಿ ಮತವನ್ನು ಪಡೆಯಲು ಸಾಧ್ಯವಿಲ್ಲ ಎಂದು ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ಹೇಳಿದ್ದಾರೆ.

ನಗರದ ಹೈಸ್ಕೂಲ್ ಬಡಾವಣೆಯಲ್ಲಿ 21ನೇ ವಾರ್ಡಿನ ಉಪ ಚುನಾವಣೆಯ ಪ್ರಚಾರ ಸಭೆಯಲ್ಲಿ ಮಾತನಾಡುತ್ತಿದ್ದ ಅವರು, ಬಿಜೆಪಿ ಪಕ್ಷವು ಅಧಿಕಾರಕ್ಕೆ ಬಂದಾಗಿನಿಂದ ಬಡವರಿಗೆ ಮನೆ ವಿತರಣೆ ಇಲ್ಲ, ಸಿಲಿಂಡರ್ , ಪೆಟ್ರೋಲ್, ಡೀಸೆಲ್ ದಿನಸಿ ಪದಾರ್ಥಗಳ ದರ ದುಪ್ಪಟ್ಟು, ಮಾಡಿದರೂ ಸಹ ಅಚ್ಛೇದಿನ ಎಂದು ಹೇಳುತ್ತಾರೆ.

ಇನ್ನೂ ಕಾಂಗ್ರೆಸ್ ಪಕ್ಷವು ತಾವು ಎಪ್ಪತ್ತು ವರ್ಷಗಳ ಕಾಲ ಆಳಿದರೂ ಜನರ ಮನಸ್ಸಿನಲ್ಲಿ ಉಳಿಯುವಂತಹ ಒಂದು ಒಳ್ಳೆಯ ಕೆಲಸವನ್ನೂ ಮಾಡಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ರತ್ನ ಡಿ. ಉಜ್ಜೇಶ್, ನಗರಸಭೆಯ ಸದಸ್ಯರಾದ ಆರ್.ಸಿ. ಜಾವೇದ್, ಜಂಬಣ್ಣ ಗುತ್ತೂರು, ನಿಂಬಕ್ಕ ಚಂದಾಪೂರ್, ಉಷಾ ಮಂಜುನಾಥ್, ಲಕ್ಷ್ಮೀ ಮೋಹನ್, ವಿರುಪಾಕ್ಷ, ಅಲ್ತಾಫ್ ಮಾಜಿ ಸದಸ್ಯ ಗಜಾನನ ದಲಭಂಜನ್, ಹಾಜಿ ಹಾಲಿ ಮುಖಂಡರಾದ ಮಾರುತಿ ಬೇಡರ, ನಂಜಪ್ಪ ನಾಗರಾಜ್ ಅಮರಾವತಿ, ಆಸೀಫ್, ಅಡಿಕೆ ಕುಮಾರ್, ಚನ್ನಬಸಪ್ಪ ಒಳಗಡ್ಡಿ, ಸಿದ್ದೇಶ್ ಒಳಗಡ್ಡಿ ಮತ್ತಿತರರು ಉಪಸ್ಥಿತರಿದ್ದರು.

## ರಾಜ್ಯಮಟ್ಟದ ಯೋಗಾಸನ ಸ್ಪರ್ಧೆಗೆ ಅಕ್ಕಮಹಾದೇವಿ ಯೋಗ ಶಾಲೆ ಆಯ್ಕೆ



ದಾವಣಗೆರೆ, ಡಿ.24- ಕರ್ನಾಟಕ ಸ್ಟೇಟ್ ಅಮೆಚೂರ್ ಯೋಗಾಸನ ಸ್ಪೋರ್ಟ್ಸ್ ಅಸೋಸಿಯೇಷನ್ ನಡೆಸಿದ ರಾಜ್ಯಮಟ್ಟದ ಆನ್ಲೈನ್ ಯೋಗಾಸನ ಸ್ಪರ್ಧೆಯು ನಾಳೆ ದಿನಾಂಕ 25ರಿಂದ 28 ರವರೆಗೆ ನಡೆಯಲಿದೆ.

ಯೋಗ ಫೆಡರೇಶನ್ ಆಫ್ ಇಂಡಿಯಾ ನಡೆಸುವ 46ನೇ ಜ್ಯೂನಿಯರ್ ಹಾಗೂ ಸಬ್ ಜ್ಯೂನಿಯರ್ ರಾಷ್ಟ್ರಮಟ್ಟದ ಯೋಗಾಸನ ಚಾಂಪಿಯನ್‌ಶಿಪ್ ನಲ್ಲಿ ದಾವಣಗೆರೆ ಜಿಲ್ಲೆಯ ಯೋಗಾಸನ ಸ್ಪೋರ್ಟ್ಸ್ ಅಸೋಸಿಯೇಷನ್ ಅಂಗ ಸಂಸ್ಥೆ ಅಕ್ಕಮಹಾದೇವಿ ಯೋಗ ಶಾಲೆಯ ಎನ್.ಭರತ್, ಜಿ. ಸೃಷ್ಟಿ ಲಕ್ಕುಂಡಿ ಹಾಗೂ ಮಲ್ಲಿಕಾರ್ಜುನ ಮಾಳಗಿ ಅವರುಗಳು ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಇವರಿಗೆ ತರಬೇತುದಾರರಾಗಿ ಕೆ. ನಾಗರಾಜ್ ಕುರ್ಡೇಕರ್ ಮಾರ್ಗದರ್ಶನ ನೀಡಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಂಡಿಪೇಟೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಮಹಾವೀರ, ಕೆಆರ್ ರಸ್ತೆ, ಗಡಿಯಾರ ಕಂಬ, ಬಿ.ಟಿ ಗಲ್ಲಿ, ಬೆಳ್ಳೂಡಿ ಗಲ್ಲಿ, ಇಸ್ಲಾಂಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್ ಆಫೀಸ್, ರೈಲ್ವೇ ಸ್ಟೇಷನ್, ವಿಜಯಲಕ್ಷ್ಮಿ ರಸ್ತೆ, ವಸಂತ ಟಾಕೀಸ್, ರೆಹಮಾನ್ ರಸ್ತೆ, ಮಂಡಕ್ಕಿ ಭಟ್ಟಿ, ರಿಂಗ್ ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್ ಮಾರ್ಕ್ಸ್ ನಗರ, ದೇವರಾಜ್ ಕ್ವಾರ್ಟರ್ಸ್, ಟಿ.ಸಿ ಲೇಔಟ್, ಎಲ್‌ಐಸಿ ಆಫೀಸ್, ಕೆ.ಆರ್ ರಸ್ತೆ, ಜಗಳೂರು ಬಸ್‌ಸ್ಟಾಪ್, ಅರಳೀಮರ ಸರ್ಕಲ್, ನೂರಾನಿ ಆಟೋಸ್ಟ್ಯಾಂಡ್, ಆನೆಕೊಂಡ ಹೊಸ ಲೇಔಟ್, ಉರ್ದು ಸ್ಕೂಲ್ ಹಿಂಭಾಗ, ಆಜಾದ್‌ನಗರ, ಅಕ್ಸಾ ಮಸೀದಿ ಹಿಂಭಾಗ, ಬೀಡಿ ಲೇಔಟ್, ಆಜಾದ್ ನಗರ ಪೊಲೀಸ್ ಸ್ಟೇಷನ್, ಹೆಗಡೆ ನಗರ, ರಜಾವುಲ್ಲಾ ಮುಸ್ತಾಫ ನಗರ, ಅಮ್ಮಜಾನ್, ಬಾಬಾಜಾನ್, ಜೋಗಲ್‌ಬಾಬಾ ಲೇಔಟ್, ಮಾಗಾನಹಳ್ಳಿ ರಸ್ತೆ ಹಳ್ಳದವರೆಗೆ, ಕೆಆರ್ ರಸ್ತೆ, ಜಗಳೂರು ಬಸ್‌ಸ್ಟ್ಯಾಂಡ್, ಜಗಳೂರು ರಸ್ತೆ ಎಆರ್‌ಬಿ ಮಿಲ್, ಚಾಮರಾಜಪೇಟೆ, ವಾಟರ್ ಟ್ಯಾಂಕ್, ಎಸ್‌ಎಸ್ ಆಸ್ಪತ್ರೆ, ಅರಳಿಮರ ಸರ್ಕಲ್, ಬೇತೂರು ರಸ್ತೆ, ಚರ್ಚ್ ರಸ್ತೆ, ಮುನ್ಸಿಪಲ್ ಕಾಲೇಜ್, ಕೊಹಿನೂರ್ ಹೋಟೆಲ್ ಹಿಂಭಾಗ, ಹಾಸಬಾವಿ ಸರ್ಕಲ್, ಮಿಲ್ಲತ್ ಸ್ಕೂಲ್ ಸುತ್ತಮುತ್ತ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಎಂಇಎಸ್ ಸಂಘಟನೆ ನಿಷೇಧಕ್ಕೆ ವೀರಶೈವ ಮಹಾಸಭಾ ಒತ್ತಾಯ



ದಾವಣಗೆರೆ, ಡಿ.24- ಬೆಳಗಾವಿಯ ಖಾನಾಪುರ ತಾಲ್ಲೂಕಿನಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಎಂಇಎಸ್ ಪುಂಡರು ಮಸಿ ಬಳಿದಿರುವುದನ್ನು ಖಂಡಿಸಿ, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಇದೇ ವೇಳೆ ಮಾತನಾಡಿದ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷರೂ ಆಗಿರುವ ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಇತ್ತೀಚೆಗೆ ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಹಲಸಿ ಗ್ರಾಮದಲ್ಲಿ ಕರ್ನಾಟಕ ಬಾವುಟಕ್ಕೆ ಹಾಗೂ ವಿಶ್ವಗುರು ಬಸವೇಶ್ವರ ಭಾವಚಿತ್ರಕ್ಕೆ ಎಂಇಎಸ್ ಬೆಂಬಲಿಗರು ಮಸಿ ಬಳಿದು ಅವಮಾನ ಮಾಡಿದ್ದು, ಈ ಕೃತ್ಯವನ್ನು ಅಖಿಲ ಭಾರತ ವೀರಶೈವ ಮಹಾಸಭಾ ಖಂಡಿಸುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಕೂಡಲೇ ಕಿಡಿಗೇಡಿಗಳನ್ನು ಬಂಧಿಸಿ ಶಿಕ್ಷೆ ವಿಧಿಸಬೇಕು. ಎಂಇಎಸ್ ಸಂಘಟನೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು ಮತ್ತು ಇಂತಹ ಘಟನೆ ಮರುಕಳಿಸದಂತೆ ಕ್ರಮ ವಹಿಸಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಜಿ. ರಮೇಶ್, ರಾಷ್ಟ್ರೀಯ ಯುವ ಘಟಕದ ಉಪಾಧ್ಯಕ್ಷ ಸಂದೀಪ್ ಅಣಬೇರು, ನಿಖಿಲ್ ಕೊಂಡಜ್ಜಿ, ನಗರ ಯುವ ಘಟಕದ ಅಧ್ಯಕ್ಷ ಶಂಭು ಉರೇಕೊಂಡಿ, ರೇಖಾ ಶಿವಕುಮಾರ್, ರಾಘವೇಂದ್ರಗೌಡ, ರತನ್, ಮಯೂರ್, ಕಾರ್ತಿಕ್ ಹಿರೇಮಠ ಮತ್ತಿತರರು ಉಪಸ್ಥಿತರಿದ್ದರು.

## ಕಕ್ಕರಗೊಳ್ಳದಲ್ಲಿ ನಾಳೆ ಕೆರೆ ಏರಿ ಭರಮ ದೇವರ ಕಾರ್ತಿಕ

ದಾವಣಗೆರೆ, ಡಿ. 24- ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮದ ಸಮೀಪ ವಿರುವ ಕೆರೆ ಏರಿ ಭರಮ ದೇವರ ಕಾರ್ತಿಕ ಮಹೋತ್ಸವ ನಾಡಿದ್ದು ದಿನಾಂಕ 26 ರ ಭಾನುವಾರ ಸಂಜೆ 7 ಕ್ಕೆ ಜರುಗಲಿದೆ. ಕಾರ್ತಿಕ ಮಾಸದ ಪ್ರಯುಕ್ತ ಅಂದು ಬೆಳಿಗ್ಗೆ 6 ಕ್ಕೆ ಅಭಿಷೇಕ, ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ ನಡೆಯಲಿದೆ.


## ನಗರದಲ್ಲಿ ಇಂದು ಹಿಮೊಫಿಲಿಯಾ ಸೊಸೈಟಿ ಮಹಾಸಭೆ

ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯ 31ನೇ ವಾರ್ಷಿಕ ಮಹಾಸಭೆಯು ಇಂದು ನಡೆಯಲಿದೆ. ಕೋವಿಡ್ ಹಿನ್ನೆಲೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಜರುಗಲಿರುವ ಮಹಾಸಭೆಯ ಅಧ್ಯಕ್ಷತೆಯನ್ನು ಸೊಸೈಟಿ ಅಧ್ಯಕ್ಷ ಡಾ|| ಸುರೇಶ್ ಹನಗವಾಡಿ ವಹಿಸಲಿದ್ದಾರೆ.

## ಶಕ್ತಿ ನಗರದಲ್ಲಿ ಇಂದು ಕಾರ್ತಿಕ

ದಾವಣಗೆರೆ ರಾಜೇಂದ್ರ ಬಡಾವಣೆ, ಶಕ್ತಿ ನಗರದ ಶ್ರೀ ವಿಘ್ನರಾಜೇಂದ್ರ ಗಣಪತಿ ಮತ್ತು ಶ್ರೀ ಅಭಯ ಹಸ್ತ ಆಂಜನೇಯ ಸ್ವಾಮಿ ದೇವ ಸ್ಥಾನದಲ್ಲಿ ಇಂದು ಸಂಜೆ ಕಡೇ ಕಾರ್ತಿಕ ಜರುಗಲಿದೆ. ಅನ್ನ ಸಂತರ್ಪಣೆ ಇರುತ್ತದೆ.

## ಶಾಮನೂರಿನಲ್ಲಿಂದು ಆಂಜನೇಯ ಕಾರ್ತಿಕ



ಶಾಮನೂರು ಶ್ರೀ ಆಂಜನೇಯ ಸ್ವಾಮಿ ಕಾರ್ತಿಕ ದೀಪೋತ್ಸವವು ಇಂದು ಸಂಜೆ 7 ಕ್ಕೆ ನಡೆಯಲಿದೆ ಎಂದು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ ತಿಳಿಸಿದೆ.

## ನಗರದಲ್ಲಿ ಇಂದು ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ಕಾರ್ತಿಕ

ಬೂದಿಹಾಳ್ ರಸ್ತೆಯ ಚೌಡೇಶ್ವರಿ ನಗರದ ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ಕಾರ್ತಿಕೋತ್ಸವವನ್ನು ಇಂದು ರಾತ್ರಿ 9 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ಸೇವಾ ಸಮಿತಿಯ ಅಧ್ಯಕ್ಷ ಡಿ.ಆರ್. ಮಂಜುನಾಥ್, ಗೌರವ ಅಧ್ಯಕ್ಷರಾದ ಸಲಾಮನೆ ಬಸಣ್ಣ, ಕಾರ್ಯದರ್ಶಿ ದಿಬ್ಬಳ್ಳಿ ರಾಜ್ ತಿಳಿಸಿದ್ದಾರೆ.

**REQUIRED**

**CLINICAL ASSISTANT FOR DENTAL CLINIC**

(Preferably Graduate Female)

MCC B block, Davangere.

**Timings : 4 to 9 pm - On Holidays 10 to 2 pm**

Contact with Bio Data : **98801 93453**

## ಪೈಪ್‌ಲೈನ್ ಕಾಮಗಾರಿ ಸ್ಥಗಿತಗೊಳಿಸಲು ಒತ್ತಾಯ

ದಾವಣಗೆರೆ, ಡಿ. 24- ಕರ್ನಾಟಕ ನೀರಾವರಿ ನಿಗಮದ ನಂ.5 ಭದ್ರಾ ನಾಲಾ ವಿಭಾಗದ ಮೇಲ್ವಿಚಾರಣೆಯಲ್ಲಿ ಜಗಳೂರು ಏತ ನೀರಾವರಿ ಯೋಜನೆಯಡಿ ಅತಿಕ್ರಮಣ ಪ್ರವೇಶ ಮಾಡಿ, ಇಂಜಿನಿಯರ್‌ಗಳ ದಬ್ಬಾಳಿಕೆಯಿಂದ ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದ್ದು, ಕೂಡಲೇ ಕಾಮಗಾರಿ ಸ್ಥಗಿತಗೊಳಿಸುವಂತೆ ಕಕ್ಕರಗೊಳ್ಳದ ಎಸ್. ಎನ್. ಮಧುಸೂದನ್ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹರಿಹರ ತಾಲ್ಲೂಕಿನ ದೀಟೂರು ಗ್ರಾಮದಿಂದ ಆರಂಭಗೊಳ್ಳುವ ಕಾಮಗಾರಿ ತುಂಗಭದ್ರಾ ನದಿ ನೀರನ್ನು ಪೈಪ್‌ಲೈನ್ ಮೂಲಕ ಗಂಗನಹರಸಿ, ಕಕ್ಕರಗೊಳ್ಳ, ಕಡ್ಲೇಬಾಳು ಸೇರಿದಂತೆ ಇತರೆ ಗ್ರಾಮಗಳ ಜಮೀನಿನ ಮೂಲಕ ಜಗಳೂರು ತಾಲ್ಲೂಕಿನ 53 ಕೆರೆಗಳನ್ನು ತುಂಬಿಸುವ ಯೋಜನೆ ಇದಾಗಿದೆ. ಆದರೆ ಯಾವುದೇ ಮಾಹಿತಿ ನೀಡದೆ, ಭೂ ಸ್ವಾಧೀನ ಪ್ರಕ್ರಿಯೆಯನ್ನೂ ಸಹ ನಡೆಸದೇ ಜಮೀನು ಅತಿಕ್ರಮಣ ಮಾಡಿಕೊಂಡು ಪೈಪ್‌ಲೈನ್ ಕಾಮಗಾರಿ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ರಸ್ತೆ ಬದಿ ನಡೆಸಬೇಕಾಗಿದ್ದ ಕಾಮಗಾರಿಯನ್ನು ಫಲವತ್ತಾದ ಭೂಮಿಯಲ್ಲಿ ನಡೆಸುತ್ತಿರುವುದು ಸರಿಯಲ್ಲ. ನ್ಯಾಯಾಲಯಕ್ಕೂ ಮಾಹಿತಿ ನೀಡದೇ ನೀರಾವರಿ ನಿಗಮದ ಅಧಿಕಾರಿಗಳು ಕಾಮಗಾರಿಗೆ ಮುಂದಾಗಿದ್ದಾರೆ. ಕೂಡಲೇ ಕಾಮಗಾರಿ ನಿಲ್ಲಿಸುವಂತೆ ಮನವಿ ಮಾಡಿದರು.

ಜಗಳೂರು ಏತ ನೀರಾವರಿ ಯೋಜನೆಯಿಂದ ಸಂಕಷ್ಟಕ್ಕೆ ಒಳಗಾಗಿರುವ ಕಕ್ಕರಗೊಳ್ಳದ ರೇಣುಕಮ್ಮ ಕರಿಬಸಪ್ಪ, ಕವಿತ ನಾಗರಾಜ್, ಮಧು ಸೂದನ್, ಪದ್ಮ ಸತ್ಯನಾರಾಯಣರಾವ್, ಸುಜಾತ ಇವರಿಗೆ ನ್ಯಾಯ ದೊರಕಿಸಲು ಆಗ್ರಹಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಂಜುನಾಥ್, ಸುಜಾತ, ಸುನಿಲ್, ರೇಣುಕಮ್ಮ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ರೆಡ್ ಕ್ರಾಸ್ ಮಹಾಸಭೆ

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆಯ 2020-21 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ಇಂದು ಬೆಳಿಗ್ಗೆ 11.30 ಕ್ಕೆ ಸಂಸ್ಥೆ ಅಧ್ಯಕ್ಷರೂ ಅದ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರ ಅಧ್ಯಕ್ಷತೆಯಲ್ಲಿ, ವಿಡಿಯೋ ಕಾನ್ಫರೆನ್ಸ್ ಮುಖಾಂತರ ನಡೆಯ ಲಿದೆ. ಸದಸ್ಯರುಗಳಿಗೆ ವಾರ್ಷಿಕ ಮಹಾಸಭೆಯ ಲಿಂಕ್ ಕಳುಹಿಸಲು ಅನುಕೂಲವಾಗಲು ಈ ಕೆಳಗಿನ ಲಿಂಕ ಅಥವಾ ಕ್ಯೂಆರ್ ಕೋಡ್ ಮೂಲಕ ತಮ್ಮ ಇತ್ತೀಚಿನ ವಿಳಾಸ, ಮೊಬೈಲ್ ನಂ, ಹಾಗೂ ಇ-ಮೇಲ್ ಐಡಿಗಳನ್ನು ದಾಖಲು ಮಾಡಲು ಕೋರಿದೆ. https://forms.gle/SNVpGqGyDCGM3pY26

**ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ., ನಿಯಮಿತ ದಾವಣಗೆರೆ.**

**#1653/51-1 & 1699/4, ಮೊದಲನೇ ಮಹಡಿ, ಬಿಐಇಟಿ ಕಾಲೇಜ್ ಮುಖ್ಯ ರಸ್ತೆ, ಸಿದ್ಧವೀರಪ್ಪ ಬಡಾವಣೆ, ದಾವಣಗೆರೆ-04 ದೂರವಾಣಿ : 224408**

**8ನೇ ವಾರ್ಷಿಕ ಮಹಾಸಭೆಯ ಆಹ್ವಾನ**

ಸಂಘದ 2020-2021ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 25.12.2021ರ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಎಂ.ಡಿ. ನೀಲಗಿರಿಯಪ್ಪ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನ, ನಿಜಲಿಂಗಪ್ಪ ಬಡಾವಣೆ, ರಿಂಗ್ ರಸ್ತೆ, ದಾವಣಗೆರೆಯಲ್ಲಿ ಏರ್ಪಡಿಸಲಾಗಿದೆ.

**ಮಾನ್ಯ ಷೇರುದಾರರಿಗೆ ಈಗಾಗಲೇ ಮಹಾಸಭೆಯ ನೋಟೀಸ್‌ಗಳನ್ನು ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ವಿನಂತಿ.**

**ವಿಶೇಷ ಸೂಚನೆ : ಕೋವಿಡ್-19 ಇರುವುದರ ಪ್ರಯುಕ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾರ್ಗಸೂಚಿ ಅನ್ವಯ ಮಾಸ್ಕ್ ಧರಿಸುವುದು ಹಾಗೂ ಸಾಮಾಜಿಕ ಅಂತರ ಪಾಲಿಸುವುದು ಕಡ್ಡಾಯ. ಸರ್ಕಾರದ ಕೋವಿಡ್ ನಿಯಮದಂತೆ ಹೆಚ್ಚುಜನ ಸಂದಣಿಗೆ ಅವಕಾಶವಿಲ್ಲದ ಪ್ರಯುಕ್ತ ಕಡ್ಡಾಯವಾಗಿ ಷೇರುದಾರ ಸದಸ್ಯರು ಮಾತ್ರ ಮಾಸ್ಕ್ ಧರಿಸಿ ಹಾಜರಾಗಲು ಕೋರಿದೆ.**

| ಸಹಿ/- | ಸಹಿ/- | ಸಹಿ/- | ಸಹಿ/- |
|---|---|---|---|
| ಶ್ರೀ ಶಿವಯೋಗಿ ಡಿ.ಆರ್. | ಶ್ರೀ ಹೆಚ್.ಎಂ. ರೇವಣಸಿದ್ದಪ್ಪ | ಶ್ರೀ ಎನ್.ಡಿ. ಮಂಜು | ಶ್ರೀ ಎಂ.ಡಿ. ನೀಲಗಿರಿಯಪ್ಪ |
| ಕಾರ್ಯದರ್ಶಿ | ಗೌರವಾಧ್ಯಕ್ಷರು | ಉಪಾಧ್ಯಕ್ಷರು | ಅಧ್ಯಕ್ಷರು |

# 15ನೇ ವರ್ಷದ ಪುಣ್ಯಸ್ಮರಣೆ



## ದಿ|| ಶ್ರೀ ಅಜ್ಜಪ್ಪರ ಹೊಸಮನೆ ಹನುಮಂತಪ್ಪನವರು

ನಿಧನ: 25.12.2006

*ನೀವು ನಮ್ಮನ್ನಗಲಿ 15 ವರ್ಷಗಳಾದವು. ಸದಾ ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಹಾಗೂ ಸದಾ ನಿಮ್ಮ ಸ್ಮರಣೆ ಯಲ್ಲಿರುವ*

**ಶ್ರೀಮತಿ ಸುಜಾತ ಮತ್ತು ಎ.ಹೆಚ್. ಕುಬೇರಪ್ಪ**
**ಶ್ರೀಮತಿ ಶ್ರೀದೇವಿ ಮತ್ತು ಎ.ಹೆಚ್. ರುದ್ರಪ್ಪ**
**ಶ್ರೀಮತಿ ಸುಮಿತ್ರಾ ಓಬಳಪ್ಪ**
**ಶ್ರೀಮತಿ ಗೀತಾ ಮತ್ತು ಟಿ. ಲಿಂಗೇಶ್**
**ಹಾಗೂ ಮೊಮ್ಮಕ್ಕಳು, ಅಜ್ಜಪ್ಪರ ವಂಶಸ್ಥರು ಕುರ್ಕಿ**


Toll Free No. 1800-102-4707

# ಸುಪ್ರೀಮ್ Supreme®

Since 1942

People who know plastics best

**Total piping solution**

ಭಾರತದಲ್ಲಿಯೇ ಅತೀ ಹೆಚ್ಚು ಮಾರಾಟವಾಗುವ ವಿಶ್ವಾಸನಿಯ ಪೈಪ್ ಮತ್ತು ಫಿಟ್ಟಿಂಗ್ಸ್‌ಗಳು

SMARTER PLUMBING & DRAINAGE SOLUTIONS FOR FUTURE READY SMART CITIES!

Download the App Supreme Pipes

ಸರ್ವರಿಗೂ ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು

Wish You All A Very Happy Christmas and New Year



Build Drainage **S.W.R.** uPVC Drainage System

**Lifeline** C-PVC Hot and Cold Water System

**Eco-Drain** Underground Drainage and Sewer System

**THE SUPREME INDUSTRIES LTD.**

Mr. Veeresh - 97400 90638 Mr. Sandeep - 7019223009








# ವಾರ್ಡ್ ನಂ. 33ರ ಕಾಮಗಾರಿಗಳ ಭೂಮಿ ಪೂಜೆ ಕಾರ್ಯಕ್ರಮ

ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ

ವಾರ್ಡ್ ನಂ.33ರ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳ ಭೂಮಿ ಪೂಜೆ ಸಮಾರಂಭ ಇವರುಗಳಿಂದ

**ಡಾ. ಜಿ.ಎಂ. ಸಿದ್ದೇಶ್ವರ** ಮಾನ್ಯ ಸಂಸದರು, ದಾವಣಗೆರೆ ಲೋಕಸಭಾ ಕ್ಷೇತ್ರ.

**ಶ್ರೀ ಎಸ್.ಎ.ರವೀಂದ್ರನಾಥ್** ಮಾನ್ಯ ಶಾಸಕರು, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ.

ದಿನಾಂಕ: 25-12-2021ರ ಬೆಳಿಗ್ಗೆ 12 ಗಂಟೆಗೆ

ಸ್ಥಳ: ಕೆ.ಎಸ್.ಎಸ್. ಕಾಲೇಜು ಎದುರು, ಸರಸ್ವತಿ ನಗರ, ದಾವಣಗೆರೆ.

**ಒಟ್ಟು ಸಿ.ಸಿ. ರಸ್ತೆ ಉದ್ದ: 670 ಮೀ.**
**ಒಟ್ಟು ಡಾಂಬರ್ ರಸ್ತೆ ಉದ್ದ: 4641 ಮೀ.**

| ಕ್ರ.ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ ಲಕ್ಷಗಳಲ್ಲಿ |
|---|---|---|
| 1 | ದಾವಣಗೆರೆ ನಗರದ ವಾರ್ಡ್ ನಂ.33 ಸರಸ್ವತಿ ನಗರದಲ್ಲಿರುವ ವಿದ್ಯಾನಿಕೇತನ ಪಬ್ಲಿಕ್ ಶಾಲೆ ಮುಖಾಂತರ 40 ಅಡಿ ರಸ್ತೆಯಿಂದ 60 ಅಡಿ ರಸ್ತೆಗೆ (ಹೈಟೆಕ್ ಆಸ್ಪತ್ರೆ ರಸ್ತೆ) ಲಿಂಕ್ ರಸ್ತೆ ಸಿ.ಸಿ. ಚರಂಡಿ ಮತ್ತು ರಸ್ತೆ ಡಾಂಬರೀಕರಣ | 150.00 |
| 2 | ದಾವಣಗೆರೆ ನಗರದ ಜಯನಗರ "ಎ" ಬ್ಲಾಕ್ ಕೆ.ಹೆಚ್. ವೀರಭದ್ರಪ್ಪ ಮನೆಯಿಂದ ಮಹೇಶ್ವರಪ್ಪರ ಮನೆಯವರೆಗಿನ ರಸ್ತೆ ಯುಜಿಡಿ ಬಾಕ್ಸ್ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿ | 50.00 |
| 3 | ದಾವಣಗೆರೆ ನಗರದ ಜಯನಗರ "ಎ" ಬ್ಲಾಕ್ ಆರ್. ಲೋಕೇಶಪ್ಪರ ಮನೆಯಿಂದ ಜಯಪ್ರಕಾಶ್ ಮನೆಯವರೆಗಿನ ರಸ್ತೆ ಯುಜಿಡಿ ಬಾಕ್ಸ್ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿ | 50.00 |
| 4 | ವಾರ್ಡ್ ನಂ.33 ದಾವಣಗೆರೆ ನಗರದ ಸರಸ್ವತಿ ಬಡಾವಣೆ, ಕೆ.ಎಸ್.ಎಸ್. ಕಾಲೇಜಿನ ಎದುರು ಸಿ.ಸಿ. ರಸ್ತೆ ಅಭಿವೃದ್ಧಿ ಕಾಮಗಾರಿ | 70.00 |
| 5 | ದಾವಣಗೆರೆ ನಗರದ ವಾರ್ಡ್ ನಂ.33 ಸರಸ್ವತಿ ನಗರ 'ಸಿ' ಬ್ಲಾಕ್‌ನಲ್ಲಿರುವ ಸಂವೇದ ಶಾಲೆ ರಸ್ತೆ ಸಿ.ಸಿ. ಚರಂಡಿ ಮತ್ತು ರಸ್ತೆ ಡಾಂಬರೀಕರಣ | 50.00 |
| | ಒಟ್ಟು ಅಂದಾಜು ಮೊತ್ತು: 370.00 ಲಕ್ಷಗಳು | |

ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಿ ಯಶಸ್ವಿಗೊಳಿಸಬೇಕೆಂದು ಕೋರುತ್ತೇವೆ.

**33ನೇ ವಾರ್ಡ್‌ನ ಸಮಸ್ತ ನಾಗರೀಕರು**



**ಕೆ.ಎಂ.ವೀರೇಶ್**
ರಾಷ್ಟ್ರೀಯ ಕ್ರೀಡಾಪಟು,
ಮಹಾನಗರ ಪಾಲಿಕೆ ಸದಸ್ಯರು, 33ನೇ ವಾರ್ಡ್, ದಾವಣಗೆರೆ

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte